ಅಚಲ

ಸಪ್ಟೆಂಬರ್ 8, 1989 ಬೆಲೆ: ರೂ. 1-50

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ದ್ವೈಮಾಸಿಕ



ಸಂಪುಟ ೫ ಸಂಚಿಕೆ ೪

'ಅಚಲ' ಪತ್ರಿಕೆಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ. ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, 1ನೇ ಮೇನ್, ವೈಯಾಳಿಕಾವಲ್
ಬೆಂಗಳೂರು–560 003.

ಚಂದಾ ವಿವರ

ವಾರ್ಷಿಕ ಚಂದಾ	:	ರೂ	10–00
ಬಿಡಿ ಪ್ರತಿ	:	ರೂ	1–50
ವಿಶೇಷ ಪ್ರತಿ	:	ರೂ	2–00
ಆಜೀವ ಚಂದಾ	:	ರೂ	100–00

Printed at PRINTSWELL, 78, 2nd Main Road Nagappa Block, Srirampuram, Bangalore-21 & Published by Dr. G. Ramakrishna on behalf of Jagruthi Mahila Adhyayana Kendra
26, I Main, Vyalikaval, Bangalore-560 003.

Editor : N. GAYATRI

ಪುಸ್ತಕ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ನಮ್ಮ ಹೊಸ ವಿಳಾಸ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, ಒಂದನೇ ಮೇನ್,
ವೈಯ್ಯಾಲಿಕಾವಲ್,
ಬೆಂಗಳೂರು–560 003.

ಒಳಗೇನಿದೆ....

ಸ್ವಾತಂತ್ರ್ಯದೆಡೆಗೆ........

'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂಬ ಹಳೆಯ ಸವಕಲು ಮಾತಿಗೆ ಕೋಪದಿಂದ ಎಗರಿ ಬೀಳದ ಹೆಣ್ಣುಗಳೇ ಇಲ್ಲವೇನೋ, ಕ್ಷಮಿಸಿ, ಅದಕ್ಕೂ ಅಪವಾದವಿರಬಹುದು. ಆದರೆ ಸ್ವಾತಂತ್ರ್ಯದ ಅರ್ಹತೆಯ ವಿಷಯವಿರಲೀ, ಅದನ್ನು ಇಚ್ಛಿಸುವ ಮಹಿಳೆಯರ ಸಂಖ್ಯೆ ತೀರಾ ನಿರಾಶೆ ಹುಟ್ಟಿಸುವಂತಹುದು. ಹುಟ್ಟಿನಿಂದಲೇ ಬಹಳಷ್ಟು ಮನೆಗಳಲ್ಲಿ ಹೆಣ್ಣಿನ (ಗಂಡಿನದೂ ಇರಬಹುದು!) ಆಸೆ, ಆಕಾಂಕ್ಷೆಗಳನ್ನು ಜೀವನ ವಿಧಾನವನ್ನು ನಿಯಂತ್ರಿಸುವ ಶಕ್ತಿಗಳೆಷ್ಟೋ! ಈ ಸಂದರ್ಭಗಳಲ್ಲೆಲ್ಲಾ ತಮಗಾಗುತ್ತಿರುವ ಸ್ವಾತಂತ್ರ್ಯಹರಣದ ಪರಿವೆಯೇ ಇಲ್ಲದ ನಮ್ಮ ಹೆಣ್ಣುಗಳಿಗೆ ಬಂಧನದ ಅನುಭವವಾದರೂ ಎಲ್ಲಿದೆ ?

ಬಂಧನದಲ್ಲಿಯೇ ಕರ್ತವ್ಯ, ಸೌಂದರ್ಯ, ಜೀವನ ಮೀಮಾಂಸೆಯನ್ನು ಕಾಣಬಯಸುವವರ ಮುಂದೆ ಸ್ವಾತಂತ್ರ್ಯದ ಕಹಳೆ ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ. ಹೆಣ್ಣಿನ ಮೂಕ ವೇದನೆಯನ್ನು (ಅದು ಸತಿಯಾಗಬಹುದು ಇಲ್ಲವೇ ಹೆಣ್ಣಿಗೆ ಸಂಬಂಧಪಟ್ಟ ದರಿದ್ರ ಆಚರಣೆ ಏನೇ ಆಗಿರಬಹುದು) ಆದರ್ಶೀಕರಿಸುವ ಈ ಸಮಾಜದಲ್ಲಿ ಬಾಳಿನ ಕರ್ಕಶತೆಯನ್ನು ಗುರುತಿಸುವುದಾದರೂ ಹೇಗೆ ? ಹೆಣ್ಣು ತೊಡುವ ಸೇವಾ ಕೈಂಕರ್ಯ ಅವಳ ದಾಸ್ಯತ್ವವನ್ನು ಸೂಚಿಸುವುದಷ್ಟೇ ಅಲ್ಲ, ಸ್ವಾತಂತ್ರ್ಯಕ್ಕಾಗಿ ಅವಳು ಹಾತೊರೆಯದ ಮನೋಭಾವದ ಸೂಚಿಯೂ ಕೂಡ.

ಸ್ವಾತಂತ್ರ್ಯ ಅಮೂರ್ತವೂ ಅಲ್ಲ; ಸನ್ನಿವೇಶಗಳಿಂದ ಅಭಾದಿತವೂ ಅಲ್ಲ. ಹಾಗೆಯೇ ಸ್ವಾತಂತ್ರ್ಯದ ನಿಯಂತ್ರಣ ವೈಯಕ್ತಿಕವಾದದ್ದಾಗಲೀ, ಸನ್ನಿವೇಶದ ನಿಯಂತ್ರಣವಾಗಲೀ ಆಗಬಹುದು. ಆದರೆ ತಿಳುವಳಿಕೆಯಿಂದ ಮಾತ್ರ ಸ್ವಾತಂತ್ರ್ಯದ ಹರಣವಾಗಲೀ, ವಿಸ್ತಾರವಾಗಲೀ ಮಾಡಿಕೊಳ್ಳಲು ಸಾಧ್ಯವಿದೆ. ಈ ತಿಳುವಳಿಕೆ ಹೆಣ್ಣಿಗೆ ಎಷ್ಟಿದೆ ? ತಿಳುವಳಿಕಸ್ಥ ಹೆಣ್ಣನ್ನು ಪುರುಷ ಬಯಸುವುದಿಲ್ಲ ವೇಕೆ ? ಅವನಿಂದ ಸ್ವಾತಂತ್ರ್ಯ ನಿಯಂತ್ರಣ ಮಾಡಲು ಸಾಧ್ಯವಾಗದೆಂದೇ ? ತಿಳುವಳಿಕೆ ಅನುಭವ ಜನ್ಯವಾದದ್ದು. ಸ್ವಾತಂತ್ರ್ಯ ಅನುಭವಿಸಲು ಬೇಕಾದ ಪ್ರಮುಖ ಸಲಕರಣೆಗಳಲ್ಲಿ ತಿಳುವಳಿಕೆಯೂ ಒಂದು.

ಸ್ವಾತಂತ್ರ್ಯದ ಆಕಾಂಕ್ಷೆಯಿದ್ದರೂ, ಸಾಕಷ್ಟು ತಿಳುವಳಿಕೆಯಿದ್ದರೂ ಸ್ವಾತಂತ್ರ ವನ್ನು ಅನುಭವಿಸಲು ಸೂಕ್ತ ಸಾಮಾಜಿಕ ರಚನೆ ಬೇಡವೆ ? ಬೇರೆ ದೇಶದಲ್ಲಿ ಸ್ವಾತಂತ್ರ್ಯ ಅನುಭವಿಸುತ್ತಿರುವ ಮಹಿಳೆಯರ ಜೀವನ ವಿಧಾನವನ್ನು ಅನುಕರಿಸಿದ ಮಾತ್ರಕ್ಕೆ ನಮಗೆ ಸ್ವಾತಂತ್ರ್ಯ ದಕ್ಕೀತೆ ? ಅಂತಹ ಬದಲಾವಣೆಯನ್ನು ನಮ್ಮಲ್ಲಿ ಬಯಸಿದರೂ, ಕೇವಲ ಇಚ್ಛಾ ಮಾತ್ರದಿಂದ ಬದಲಾವಣೆಯ ಸ್ಥಿತಿ ಉಂಟಾಗುವುದಿಲ್ಲ. ಅಂತರ್‌ರಚನೆಯಲ್ಲೇ ಮೂಲಭೂತ ಬದಲಾವಣೆಯ ಅಗತ್ಯವಿದೆ. ಈ ಬದಲಾವಣೆಯ ಪ್ರತಿ ಹಂತದಲ್ಲೂ ಆಗುವ ಆಂತರಿಕ ಘರ್ಷಣೆಗಳಿಂದ ತಿಳುವಳಿಕೆ ಮೂಡುತ್ತದೆ. ಈ ತಿಳುವಳಿಕೆಯ ನೆರವಿನಿಂದ ಸ್ವಾತಂತ್ರ್ಯದತ್ತ ದಿಟ್ಟ ಹೆಜ್ಜೆ ಸಾಗಬೇಕು.

—ಎನ್. ಗಾಯತ್ರಿ

ಕವನ

ಇದ್ದೆ - ಇರಲಿಲ್ಲ

ನಮ್ಮ ಪ್ರೇಮ
ನೀಲಾಂಜನೆಯ ನೃತ್ಯ
ಮುಗಿದದ್ದೆಲ್ಲಿ ಕಾಣದು—
ಕಾಲು ಕುಣಿಯುತ್ತಿತ್ತು,
ಗೆಜ್ಜೆ ಗುನುಗುತ್ತಿತ್ತು

ನೀನೇ, ನೀನೇ ಎಂದುಕೊಂಡಿದ್ದೆ
ನೀನಾಗಿರಲಿಲ್ಲ,
ಯಾರೀಕೆ ನಿನ್ನಂತೆ ಕಂಡವಳು
ನೀನಲ್ಲದವಳು ?
ಕಾಲು ಕುಣಿದೇ ಇತ್ತು
ನಾನಿದ್ದೆ ನೀನಿರಲಿಲ್ಲ.

ನಾನೇ ನಾನೇ ಎಂದುಕೊಂಡಿದ್ದೆ
ನಾನಾಗಿರಲಿಲ್ಲ
ಯಾರೀತ ನನ್ನಂತೆ ಕಂಡವನು
ನಾನಲ್ಲದವನು ?
ಗೆಜ್ಜೆ ಗುನುಗುತಲಿತ್ತು
ನೀನಿದ್ದೆ ನಾನಿರಲಿಲ್ಲ.

ಕಾಲುಕುಣಿದೇ ಇತ್ತು
ಗೆಜ್ಜೆ ಗುಂಯ್‌ಗುಡುತ್ತಿತ್ತು
ಅತ್ತಿತ್ತ, ಸುತ್ತ ಮುತ್ತ
ವೃತ್ತ ವೃತ್ತ ವೃತ್ತ
ನೃತ್ತ
ಪ್ರೇಮ ನೀಲಾಂಜನೆಯ ನೃತ್ತ
ಸಾಗುತಲಿತ್ತು
ನಾನಿರಲಿಲ್ಲ, ನೀನಿರಲಿಲ್ಲ.

ರವಿ

ಅನಿಷ್ಟದ ಮುಖವಾಡ

ಜಪಾನಿನ ಕೆತ್ತನೆಯೊಂದು
ನನ್ನ ಗೋಡೆಯ ಮೇಲಿದೆ.
ಅನಿಷ್ಟ ರಾಕ್ಷಸನ ಮುಖವಾಡ ಅದು.
ಚಿನ್ನದ ಕುಸುರಿ ಕೆಲಸವಿದೆ
ಅನುಕಂಪದಿಂದ ಅದನ್ನು ನೋಡಿದೆ.
ಹಣೆಯ ಮೇಲಿನ ಉಬ್ಬಿದ ನರಗಳು
ಸೂಚಿಸುತ್ತವೆ—
ಅನಿಷ್ಟವಾಗುವುದು
ಬಲು ಆಯಾಸದ ಕೆಲಸ

—ಬ್ರೆಕ್ಟ್
ಅನು : ಹರ್ಗಾ

ಹೆಣ್ಣಾಗ ಬಯಸದವರು

ನಿಮಗೆ ಸಾಲಾಗಿ ನಾಲ್ಕು ಹೆಣ್ಣು ಮಕ್ಕಳೆ ?

ಗರ್ಭದಲ್ಲೇ ಲಿಂಗ ಪತ್ತೆ ಹಚ್ಚಿ, ಗರ್ಭಪಾತ ಮಾಡಿಸಿಕೊಳ್ಳಬಹುದಾದ ಕಾಲಕ್ಕೂ ಮೊದಲೇ ಹುಟ್ಟಿಬಿಟ್ಟರೆ?

ಚಿಂತೆ ಇಲ್ಲ ಪರಿಹಾರವಿದೆ.

ಭ್ರೂಣಹತ್ಯೆ, ಶಿಶುಹತ್ಯೆ ಮಾಡಲಾರದೆ ಚಡಪಡಿಸಿ ಉಳಿದ ತಂದೆ–ತಾಯಿಯರಿಗೆ, ಈಗ 'ಗಂಡು' ಮಗನನ್ನು ಪಡೆಯಲು ಹೊಚ್ಚ ಹೊಸ ವಿಧಾನ ! ಉದ್ದುದ್ದ ಬೆಳೆದು ನಿಂತ ಗಂಡು ಮಗನನ್ನು ಧಿಡೀರನೆ ಪಡೆಯಬಹುದು— ಹೆಣ್ಣನ್ನು ಗಂಡಾಗಿಸುವ ಶಸ್ತ್ರಕ್ರಿಯೆಯ ಮೂಲಕ !"

ಸದ್ಯದಲ್ಲೆ ಇಂಥಾ ಜಾಹಿರಾತುಗಳನ್ನು ಕಂಡರೆ ಅಚ್ಚರಿ ಪಡಬೇಡಿ. ಈಗಾಗಲೇ 'ಇಂದು 500 ಖರ್ಚು ಮಾಡಿ, ಮುಂದೆ 50,000ದ ಖರ್ಚಿನಿಂದ ಬಚಾವಾಗಿ' ಎಂಬಂಥ ಲಜ್ಜೆಗೇಡಿನ ಜಾಹಿರಾತುಗಳ ಮೂಲಕ ಸ್ತ್ರೀ ಭ್ರೂಣಹತ್ಯೆಗೆ ಕರೆಕೊಟ್ಟ ಭಾರತದಲ್ಲಿ, ಇಂಥಾ ಜಾಹಿರಾತುಗಳೇನೂ ಅಸಂಭವವಲ್ಲ.

ಭ್ರೂಣಾವಸ್ಥೆಯಲ್ಲೇ ಅನುವಂಶಿಕ ರೋಗಗಳನ್ನು ಕಂಡು ಹಿಡಿಯಲು ಹೊರಬಂದ 'ಅಮ್ನಿಯೋ ಸಿಂಟೆಸಿಸ್' ತಂತ್ರವನ್ನು, ಲಿಂಗ ಪತ್ತೆಗೆ ಭ್ರೂಣಹತ್ಯೆಗೆ ಉಪಯೋಗಿಸಿದ್ದಾಗಿದೆ. ಇದೀಗ ಇಂಥಾ ದುರುಪಯೋಗಕ್ಕೆ ಮತ್ತೊಂದು ವೈದ್ಯಕೀಯ ವಿಧಾನ ತುತ್ತಾಗಲಿದೆ. ಅದೇ, ಸ್ಥಿತ್ಯಂತರ ಲಿಂಗಗಳ ಲಿಂಗ ಪರಿವರ್ತಿಸುವ ಶಸ್ತ್ರಕ್ರಿಯೆ.

ಮೂರು ತಿಂಗಳ ಹಿಂದೆ, ದಿಲ್ಲಿಯ ಮಂಜು ಚಾವಲೀ, ಮನೀಷಾ ಚಾವಲಾ ಆಗಿ ಬದಲಾದದ್ದು, ಹೊಸ ಪ್ರಶ್ನೆಗಳನ್ನು ಎತ್ತಿದೆ. ಮಂಜು ಹೆಣ್ಣು ದೇಹದೊಂದಿಗೆ ಹುಟ್ಟಿದವರೂ, ತನ್ನೊಳಗೆ ಗಂಡು ಮನಸ್ಸನ್ನು ಹೊತ್ತವಳು— ಗಂಡಾಗ ಬಯಸಿದವಳು. ಜೊತೆಯ ಗೆಳತಿ ಮಧುವನ್ನು ಪ್ರೀತಿಸಿದಳು. ಮಧುವನ್ನು ವಿವಾಹವಾಗಲು ಆಕೆ ಗಂಡಾಗುವುದು ಅನಿವಾರ್ಯವಾಗಿ ಕಂಡಿತು. ದಿಲ್ಲಿಯ ಕರೋಲ್‌ಬಾಗಿನ 'ಡಾ। ಬಾಲಿಕ್ಲಿನಿಕ್' ನಲ್ಲಿ ಆಕೆ ಲಿಂಗ ಪರಿವರ್ತನೆ ಹೊಂದಿ ಮನೀಷಾ ಆಗಿ, ಇದೀಗ ಮಧುವನ್ನು ವಿವಾಹವಾಗಿದ್ದಾಳೆ.

ತಪ್ಪು ಲಿಂಗದಲ್ಲಿ ಹುಟ್ಟಿದವರ ಸಮಸ್ಯೆ ಎಲ್ಲಾ ಕಾಲಕ್ಕೂ, ವೈದ್ಯರಿಗೂ, ಮನೋವಿಜ್ಞಾನಿಗಳಿಗೂ ಸವಾಲಾಗಿದೆ. ಗಂಡು ದೇಹದಲ್ಲಿ ಹೆಣ್ಣು ಮನಸ್ಸನ್ನೂ ಹೆಣ್ಣು ದೇಹದಲ್ಲಿ ಗಂಡು ಮನಸ್ಸನ್ನೂ ಇಟ್ಟುಬಿಟ್ಟ ಪ್ರಕೃತಿಯ ತಪ್ಪನ್ನು ಇಂದು ವೈದ್ಯರು ತಿದ್ದಿ ಸರಿಪಡಿಸಲು ಹೆಣಗುತ್ತಿದ್ದಾರೆ. ಇದಾಗಲೇ ಗಂಡಾಗಿ ಹುಟ್ಟಿ ಹೆಣ್ಣಾಗ ಬಯಸಿ, ಕಡೆಗೆ ಶಸ್ತ್ರಕ್ರಿಯೆ, ಹಾರ್ಮೋನ್‌ಗಳ ಮೂಲಕ ಹೆಣ್ಣಾದ ಹಲವು ಪ್ರಕರಣಗಳು ಭಾರತದಲ್ಲೂ ಕಾಣಸಿಗುತ್ತವೆ. ಹುಟ್ಟಿನಿಂದಲೇ ತಪ್ಪು ದೇಹದಲ್ಲಿ ಸಿಕ್ಕಿಕೊಂಡಂತೆ ಮಾನಸಿಕವಾಗಿ ಹಿಂಸೆ ಪಡುವವರು, ತಮ್ಮ ಲಿಂಗದೊಡನೆ ಗುರುತಿಸಿಕೊಳ್ಳಲಾರದವರು, ಇಂಥಾ ಶಸ್ತ್ರಚಿಕಿತ್ಸೆಗೆ ಶರಣು ಹೋಗುತ್ತಾರೆ. ಈ ರೀತಿಯ ಲಿಂಗ ಪರಿವರ್ತನೆಯಿಂದ ಸಂತಾನ ಸಾಧ್ಯತೆ ಇಲ್ಲವಾಗುವುದು ನಿಜ, ದತ್ತು ತೆಗೆದುಕೊಳ್ಳುವ ಸಾಧ್ಯತೆ ಇರುವುದರಿಂದ ಇದೊಂದು ಸಮಸ್ಯೆಯಾಗಬೇಕಿಲ್ಲ. ಆದರೆ ಹೆಣ್ಣಿಂದ ಗಂಡಾದ ವ್ಯಕ್ತಿ ಲೈಂಗಿಕ ಜೀವನ ನಡೆಸಲು ಸಾಧ್ಯವಿಲ್ಲ. ಹೀಗಿದ್ದೂ ಈ ಶಸ್ತ್ರಕ್ರಿಯೆ ಆಯಾ ವ್ಯಕ್ತಿಗೆ ತಕ್ಕಮಟ್ಟಿನ ಆತ್ಮವಿಶ್ವಾಸ ನೀಡಿ, ತನ್ನೊಳಗಿನ ಗಲಿಬಿಲಿ ಗೊಂದಲಕ್ಕೆ ವಿರಾಮ ಹಾಕುವುದುಂಟು. ಆದರೆ, ಸ್ಥಿತ್ಯಂತರ ಲಿಂಗಿಗಳಿಗೆ ಚಿಕಿತ್ಸೆಯಾಗಿರುವ ಈ ಶಸ್ತ್ರಕ್ರಿಯೆ ಗಂಡುಮಗನ ವಿಪರೀತ ವ್ಯಾಮೋಹದ ನಮ್ಮ ಸಮಾಜದಲ್ಲಿ ಹೆಣ್ಣನ್ನು ಗಂಡಾಗಿಸುವ ವಿಕೃತ ತಂತ್ರವಾಗಬಹುದೆ ಎಂಬ ಭಯ, ಕಳಕಳಿ ಖಂಡಿತಾ ಏಳುತ್ತದೆ. ಮಂಜುವಿನ ಶಸ್ತ್ರಕ್ರಿಯೆಗೆ ಬಂದ ಪ್ರತಿಕ್ರಿಯೆಯನ್ನೇ ನೋಡಿ. 'ಡಾ। ಬಾಲಿಕ್ಲಿನಿಕ್' ಮನೋಚಿಕಿತ್ಸಕ ಡಾ। ವಿಮಲ ಚೌಧರಿ ಹೇಳುವಂತೆ 'ಅವರಲ್ಲಿ ಬಂದ ಕೇಸುಗಳೆಲ್ಲ ಹೆಣ್ಣೊಂದು ಗಂಡಾಗ

ಬಯಸುವವರೆ.' ಅದೇ ಕ್ಲಿನಿಕ್‌ನ ಪ್ರಮುಖ ವೈದ್ಯರಾದ ಡಾ। ರಾಜಿಂದರ್ ಬಾಲಿ 'ಈ ಸುದ್ದಿ ಪ್ರಚಾರವಾದೊಡನೆ ನಮ್ಮಲ್ಲಿಗೆ ಅನೇಕ ತಾಯ್ತಂದೆಯರು ಧಾವಿಸಿ ಬಂದರು. ಅವರೆಲ್ಲರದೂ ಒಂದೇ ಬೇಡಿಕೆ—ನಮಗೆ ಮೂರು, ನಾಲ್ಕು ಹೆಣ್ಣು ಮಕ್ಕಳಿದ್ದಾರೆ, ಒಂದನ್ನು ಗಂಡಾಗಿಸಿ!' ಎಂದಿದ್ದಾರೆ.

ಇಂಥ ಸ್ಥಿತಿಯಲ್ಲಿ ಈ ಚಿಕಿತ್ಸೆ ದುರುಪಯೋಗವಾಗದು ಎಂಬ ಖಾತ್ರಿ ಇದೆಯೆ? ಗಂಡಿನ ಬಯಕೆಯ ತಾಯಿ–ತಂದೆಗಳು ಬಲಾತ್ಕಾರವಾಗಿ ತಮ್ಮ ಹೆಣ್ಣು ಮಕ್ಕಳ ಶಸ್ತ್ರಚಿಕಿತ್ಸೆಗೆ ಒಳಪಡಿಸುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ. ಜೊತೆಗೆ ಈ ಶಸ್ತ್ರಕ್ರಿಯೆ ಅತ್ಯಂತ ದುಬಾರಿ ಹಾಗೂ ಅಪಾಯಕಾರಿ. ಗಲ್ಲಿಗೊಂದು ಬೀದಿಗೊಂದು ನಕಲಿ ವೈದ್ಯ ಹುಟ್ಟಿ ಈಗಾಗಲೇ 'ಅಮ್ನಿಯೋಸಿಂಟೆಸಿಸ್'ನ ಅಧ್ವಾನವಾದಂತೆ ಇದೂ ಆಗದೆಂಬ ಗ್ಯಾರಂಟಿ ಇಲ್ಲ. ಜೊತೆಗೇ ಆಸ್ತಿ ಹಕ್ಕು ಗಂಡು–ಹೆಣ್ಣಿಗೆ ಅಸಮಾನವಿರುವ ನಮ್ಮ ದೇಶದಲ್ಲಿ ಈ ಶಸ್ತ್ರಕ್ರಿಯೆಯ ದುರುಪಯೋಗಕ್ಕೆ ಹತ್ತು ಹಲವು ಹಾದಿಗಳಿವೆ. ಪಿತ್ರಾರ್ಜಿತ ಆಸ್ತಿಗಾಗಿಯೇ ಗಂಡಾಗಿ ಬದಲಾಗ ಬಯಸಿದ ಒಂದೆರಡು ಕೇಸುಗಳನ್ನು ಈ ಡಾಕ್ಟರ್, ಹಿಂದೀ ಸಾಪ್ತಾಹಿಕಕ್ಕೆ ಕೊಟ್ಟ ಸಂದರ್ಶನದಲ್ಲಿ ಉಲ್ಲೇಖಿಸಿದ್ದಾರೆ.

ಎಲ್ಲಕ್ಕಿಂತ ಕುತೂಹಲಕಾರಿ ಎಂದರೆ, ಹೆಣ್ಣು ದೇಹದಲ್ಲಿ ಸಿಕ್ಕಿ ಬಿದ್ದ ಗಂಡು ಮನಸ್ಸು ಎಂಬುದರ ಅರ್ಥವೇನು? ಡಾ। ವಿಮಲ ಚೌಧರಿ ಪ್ರಕಾರ 'ಇವರೆಲ್ಲ ಹೆಂಗಸರ ಕಾರ್ಯಗಳಲ್ಲಿ ಉತ್ಸಾಹ ಕಂಡವರು'. ಆದರೆ ಚಿಕ್ಕಂದಿನಲ್ಲಿ ಕುಂಟೆಬಿಲ್ಲೆ, ಚೌಕಾಬಾರದ ಬದಲು, ಗಿಲ್ಲಿದಾಂಡು ಕಬಡ್ಡಿ ಆಡಿದರೆ ಅದು ಗಂಡು ಮನಸ್ಸೆ? ಅಡಿಗೆ, ಹೊಲಿಗೆ ನಾಚಿಕೆ, ಅಸಹಾಯಕತೆ ಸ್ತ್ರೀ ಲಕ್ಷಣಗಳೆಂದು ವ್ಯಾಖ್ಯಾನಿಸುವ ನಮ್ಮ ಸಮಾಜದಲ್ಲಿ, ಮುಕ್ಕಾಲುಪಾಲು ಜನ ಹೆಣ್ಣಾಗ ಬಯಸಲಾರರು. ಆತ್ಮವಿಶ್ವಾಸ, ಸಾಹಸ ಪ್ರವೃತ್ತಿ, ಸ್ವತಂತ್ರ ಮನೋಭಾವಗಳ 'ಗಂಡು' ಲಕ್ಷಣಗಳೆಂದು ಬೋಧಿಸುವ ಸಮಾಜದಲ್ಲಿ ಇಂಥಾ ಪ್ರವೃತ್ತಿಯುಳ್ಳ ಹೆಣ್ಣುಗಳೆಲ್ಲ ತಾವು ಪೂರ್ಣ ಹೆಣ್ಣಲ್ಲವೇನೋ, ಎಂಬ identity crisisಗೆ ಒಳಗಾಗಿರಬಹುದು. ತಾಯ್ತಂದೆಯರು ಹೆಣ್ಣು ಮಕ್ಕಳಿಗೆ ಬಾಲ್ಯದಿಂದಲೇ ಹೇರುವ ಕಟ್ಟುಪಾಡುಗಳು, ಆಕೆಯ ಸ್ತ್ರೀತ್ವದ ಲಕ್ಷಣಗಳನ್ನೆಲ್ಲ ಮುದುಡಿ ಮುಚ್ಚಿಡ ಬಯಸುವ ನೀತಿಗಳು, ಆಕೆಗೆ ತನ್ನ ಹೆಣ್ತನದ ಬಗ್ಗೆ ಜುಗುಪ್ಸೆ, ಹೇಸಿಗೆ ಹುಟ್ಟಿಸಿರಲೂ ಸಾಧ್ಯ. ಗಂಡು–ಹೆಣ್ಣುಗಳ ಪ್ರವೃತ್ತಿಗಳ ಅಸಹಜ ರೀತಿಯಲ್ಲಿ ವಿಂಗಡಿಸಿಡುವ ನಮ್ಮ ಸಾಮಾಜಿಕ ರೀತಿ ನೀತಿಗಳು ಇಂಥ ಮಾನಸಿಕ ಏರುಪೇರಿಗೆ ಕಾರಣವಾಗಿರಬಹುದೆ? ಇವೆಲ್ಲ ತಜ್ಞರ ಅಧ್ಯಯನಕ್ಕೆ ಒಳಗಾಗಬೇಕಾದ ವಿಷಯಗಳು. ಇದರಾಚೆ ಹೆಣ್ಣು ಮನಸ್ಸು, ಗಂಡು ಮನಸ್ಸುಗಳ ವ್ಯತ್ಯಾಸ ವಿವರಣೆಗಳನ್ನೂ ಮನೋವಿಜ್ಞಾನಿಗಳು ಉತ್ತರಿಸಬೇಕಿದೆ. ಲೈಂಗಿಕವಾಗಿ ಮಂಜು ಚಾವಲಾಳ ರೀತಿಯಲ್ಲಿ ಹೆಣ್ಣಿನತ್ತಾ ಆಕರ್ಷಿತವಾಗುವ ಹೆಣ್ಣನ್ನು 'ಗಂಡು' ಎಂದು ಕರೆಯಬೇಕೆ, 'ಸಲಿಂಗಿ' ಎನ್ನಬೇಕೇ ಎಂಬುದನ್ನೂ ತಜ್ಞರು ಉತ್ತರಿಸಬೇಕು.

ಬಹು ಮುಖ್ಯವಾಗಿ ನಾವು ಇಂದು ಗುರುತಿಸಬೇಕಾಗಿರುವುದು, ಗಂಡಾಗ ಬಯಸುವವರ ಸಮಸ್ಯೆಗಳನ್ನು ಇದಕ್ಕೆ ತಕ್ಕ ಕಾನೂನುಗಳು ಹಾಗೂ ಬದಲಾದ ವ್ಯಕ್ತಿಯ ಪುನರುಜ್ಜೀವನದ ವ್ಯವಸ್ಥೆಗಳು ಏರ್ಪಡಬೇಕು. ಸಮಾನ ಆಸ್ತಿ ಹಕ್ಕಿನಿಂದ ಈ ಶಸ್ತ್ರಕ್ರಿಯೆಯ ಅರ್ಧ ದುರುಪಯೋಗ ನಿಲ್ಲಬಹುದು. ಆದರಾಚೆ ಹೆಣ್ಣು ಬದುಕು ಹೇಸಿಗೆ ಎಂದಾಗಲೀ ಹೆಣ್ಣು ಜೀವನ ದೌರ್ಭಾಗ್ಯದೆಂದಾಗಲೀ ಬೋಧಿಸದೆ, ಹೆಣ್ಣು–ಗಂಡುಗಳ ಸಮಾನವಾಗಿ ಬೆಳೆಸುವುದರಿಂದ, ಸಾಮಾಜಿಕ ಕಾರಣಗಳಿಗೆ ಗಂಡಾಗ ಬಯಸುವವರು ತಪ್ಪಬಹುದು.

ಒಟ್ಟಿನಲ್ಲಿ ಮಂಜು–ಮನೀಷಾ ನಮ್ಮೆದುರು ಪ್ರಶ್ನೆಗಳ ಗುಡ್ಡೆಯನ್ನೇ ಹಾಕಿದ್ದಾಳೆ. ಈ ದಿಕ್ಕಿನಲ್ಲಿ ವೈದ್ಯರ, ಮನೋವಿಜ್ಞಾನಿಗಳ, ನ್ಯಾಯಪಾಲಕರ, ಸಮಾಜ ಸುಧಾರಕರ—ಎಲ್ಲರ ಗಮನ ಹರಿಯಬೇಕಿದೆ—ಈ ಸಮಸ್ಯೆಗೊಂದಿಷ್ಟು ಸಮಾಧಾನಗಳ ಹುಡುಕಬೇಕಿದೆ.

—ನೇಮಿಚಂದ್ರ

—O—

ಉದ್ಯೋಗಸ್ಥ ಮಹಿಳೆ—ಒಂದು ಸಮೀಕ್ಷೆ

ಉದ್ಯೋಗಸ್ಥ ಮಹಿಳೆಯರ ಅಥವಾ ನಿರುದ್ಯೋಗಿ ಮಹಿಳೆಯರ ಪ್ರಮಾಣದ ಬಗೆಗೆ ಆಗಾಗ್ಗೆ ಘೋಷಣೆಗಳು ಹೊರಬೀಳುವುದುಂಟು. ಆದರೆ ಅವು ಇನ್ನಿತರ 'ಪ್ರಮುಖ ವಿಷಯ'ಗಳಂತೆ ಉದ್ದೇಶವನ್ನಂತೂ ಮೂಡಿಸುವುದಿಲ್ಲ. ಮಹಿಳಾ ಉದ್ಯೋಗ ಕುರಿತಂತೆ ಕಾರ್ಯಕ್ರಮಗಳನ್ನು ಸರ್ಕಾರ ಪ್ರಕಟಿಸುತ್ತದೆ. ಆದರೆ ಅದು ಸರ್ಕಾರಿ ಕಡತ ತುಂಬಲಷ್ಟೇ. ಒಂದು ವೇಳೆ ಕಾರ್ಯರೂಪ ತಳೆವ ಸ್ಥಿತಿಗೆ ಬಂದರೆ, ಅದು ಒಂದೆರಡು ಹೆಜ್ಜೆಯನ್ನಷ್ಟೇ ಇಡುತ್ತದೆ.

ರಾಷ್ಟ್ರದ ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆಯನ್ನು ಸರಿಯಾಗಿ ಪತ್ತೆ ಹಚ್ಚುವುದು ನಮ್ಮ ನೆರಳನ್ನು ನಾವೇ ಅಟ್ಟಿಸಿಕೊಂಡು ಹೋದಂತೆ. ಅಂಕಿ ಸಂಖ್ಯೆ ದೊರೆತರೂ ಅದು ಸಂಘಟಿತ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಅಸಂಘಟಿತ ಕ್ಷೇತ್ರದಲ್ಲಿನ ಅಂಕಿ ಸಂಖ್ಯೆ ಅಂದಾಜು ಸುಲಭ ಸಾಧ್ಯವಲ್ಲ. ಸಂಘಟಿತ ಕ್ಷೇತ್ರದ ಅಂಕಿ ಸಂಖ್ಯೆ ಕೂಡ ಸ್ವಲ್ಪ ಮಟ್ಟಿಗೆ ಹಳೆಯದೇ ಆಗಿರುತ್ತದೆ. ಇತ್ತೀಚಿನ ಅಂಕಿ ಸಂಖ್ಯೆ ಕೂಡ ದೊರೆಯುವುದು ದುರ್ಲಭ. (ರಾಷ್ಟ್ರೀಯ ಅಂಕಿ ಸಂಖ್ಯೆ 1988ರ ಮಾರ್ಚಿಯಾದರೆ ಕರ್ನಾಟಕದ್ದು 1988ರ ಜೂನ್.)

ಕರ್ನಾಟಕದ ಆರ್ಥಿಕ ವ್ಯವಸ್ಥೆಯಲ್ಲಿನ ಸಂಘಟಿತ ಕ್ಷೇತ್ರದಲ್ಲಿ ಮಹಿಳಾ ಉದ್ಯೋಗಿಗಳ ಸ್ಥಾನಮಾನದ ಬಗೆಗೆ ಒಂದು ಪರಿಶೀಲನೆಗೆ ನಡೆಸುವ ಮುನ್ನ ಈ ಕೆಲವು ಅಂಶಗಳನ್ನು ಪರಿಗಣನೆಯಲ್ಲಿಟ್ಟುಕೊಳ್ಳಬೇಕಾದುದು ಅಗತ್ಯ: ರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಸಂಖ್ಯೆ ಶೇಕಡ 48. ಕರ್ನಾಟಕದಲ್ಲಿ ಇದು ಶೇಕಡ 49; ಕರ್ನಾಟಕದಲ್ಲಿ ಮಹಿಳಾ ಅಕ್ಷರಸ್ಥರ ಪ್ರಮಾಣ ಶೇಕಡ 28 ಇದ್ದರೆ ರಾಷ್ಟ್ರದಲ್ಲಿ ಶೇಕಡ 2? ರಷ್ಟು ಮಹಿಳೆಯರು ಅಕ್ಷರಸ್ಥರು; ಸ್ತ್ರೀ–ಪುರುಷರ ಪ್ರಮಾಣ ಕೂಡ ಕರ್ನಾಟಕದಲ್ಲಿ ಅಧಿಕ. ಪ್ರತಿ ಸಾವಿರ ಪುರುಷರಿಗೆ ಕರ್ನಾಟಕದಲ್ಲಿ 963 ಮಹಿಳೆಯರಿದ್ದರೆ ರಾಷ್ಟ್ರದಲ್ಲಿ 933 ಮಹಿಳೆಯರಿದ್ದಾರೆ; ರಾಷ್ಟ್ರ ಮಟ್ಟದಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಒಟ್ಟು ಉದ್ಯೋಗಿಗಳಲ್ಲಿ ಶೇಕಡ 13.4 ಇದ್ದರೆ ಕರ್ನಾಟಕದಲ್ಲಿ ಅದು ಶೇಕಡ 15.6 ರಷ್ಟು; 1987–88ರ ಅವಧಿಯಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆಯಲ್ಲಿ ಶೇಕಡ 8ರಷ್ಟು ಏರಿಕೆ ಕಂಡು ಬಂದಿದ್ದರೆ, ರಾಷ್ಟ್ರದಲ್ಲಿ ಅದು ಶೇಕಡ 3ರಷ್ಟು ಮಾತ್ರ.

ಮಹಿಳಾ ಉದ್ಯೋಗ ಕ್ಷೇತ್ರದಲ್ಲಿ ರಾಜ್ಯದ ನಿರ್ವಹಣೆ ಗಮನಾರ್ಹವಾಗಿದ್ದರೂ ಸಂಘಟಿತ ವಲಯದಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಸುಮಾರು ಎರಡು ಲಕ್ಷ ಮಾತ್ರ. ಕೃಷಿ, ರಕ್ಷಣಾ ಬಲ ಮತ್ತು ಸ್ವಯಂ ಉದ್ಯೋಗಸ್ಥರು ಈ ಸಮೀಕ್ಷೆಯಿಂದ ಹೊರತಾಗಿರುವುದರಿಂದ ಹಾಗೂ ಖಾಸಗಿ ವಲಯದಲ್ಲಿ 10 ರಿಂದ 24 ಮಂದಿಯನ್ನು ನೇಮಕ ಮಾಡಿಕೊಂಡಿರುವ ಗುರುತಿಸಲಾಗದ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಸಂಖ್ಯೆ ಸ್ಪಷ್ಟವಾಗಿ ಸಿಗದಿರುವುದರಿಂದ ಎರಡು ಲಕ್ಷ ಉದ್ಯೋಗಿಗಳು ಎಂಬ ಅಂದಾಜು ತೀರಾ ಕಡಿಮೆ ಸಂಖ್ಯೆ ಎಂದೆನಿಸಬಹುದು.

ಸರ್ಕಾರಿ ವಲಯ

ಸರ್ಕಾರಿ ಕ್ಷೇತ್ರವೇ ಹೆಚ್ಚು ಮಹಿಳೆಯರಿಗೆ ಉದ್ಯೋಗ ನೀಡಿರುವುದು. ಕೇಂದ್ರ ರಾಜ್ಯ ಸರ್ಕಾರ, ಅರೆಸರ್ಕಾರಿ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ 1.4 ಲಕ್ಷ ಮಹಿಳಾ ಉದ್ಯೋಗಿಗಳಿದ್ದಾರೆ. ಖಾಸಗಿ ಕ್ಷೇತ್ರವು (ದೊಡ್ಡದು ಮತ್ತು ಸಣ್ಣ ಪುಟ್ಟ ಸಂಸ್ಥೆಗಳು) ಕೇವಲ 70,000 ಮಹಿಳೆಯರಿಗೆ ಉದ್ಯೋಗ ನೀಡಿವೆ.

ಸಂಘಟಿತ ವಲಯದಲ್ಲಿಯೇ ಮಹಿಳೆಯರು ಎಂಥ ಉದ್ಯೋಗಗಳಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆಂಬುದನ್ನು ಗಮನಿಸಿದರೆ ಕೆಲವು ಗಮನಾರ್ಹ ಅಂಶಗಳು ಕಂಡು ಬರುತ್ತವೆ. ಸಗಟು ಅಥವಾ ಚಿಲ್ಲರೆ ವ್ಯಾಪಾರ, ಹೊಟೇಲ್, ಸಾರಿಗೆ ಸಂಪರ್ಕ, ಹಣಕಾಸು, ವಿಮೆ, ವಾಣಿಜ್ಯ, ಸಮುದಾಯ, ಸಾಮಾಜಿಕದಂಥ ಸೇವಾ

ವಲಯದಲ್ಲಿ 1.5 ಲಕ್ಷ ಮಹಿಳೆಯರು ಉದ್ಯೋಗಿಗಳಾಗಿದ್ದಾರೆ. ತಯಾರಿಕೆ, ವಿದ್ಯುತ್, ಅನಿಲ, ನೀರು ಮತ್ತು ಕಟ್ಟಡ ನಿರ್ಮಾಣದಂಥ ಕ್ಷೇತ್ರಗಳನ್ನು ಪರಿಶೀಲಿಸಿದರೆ, ಖಾಸಗಿ ವಲಯದಲ್ಲಿಯೇ ಹೆಚ್ಚು ಉದ್ಯೋಗ ಅವಕಾಶ ಇರುವಂತೆ ಕಾಣುತ್ತದೆ. ಈ ಕ್ಷೇತ್ರದಲ್ಲಿ ಖಾಸಗಿ ವಲಯವು 37,400 ಮಹಿಳೆಯರಿಗೆ ಕೆಲಸ ಕೊಟ್ಟಿದ್ದರೆ ಸರ್ಕಾರಿ ವಲಯವು 11,400 ಮಹಿಳೆಯರಿಗೆ ಉದ್ಯೋಗ ನೀಡಿವೆ.

'ಸೇವಾ' ಕ್ಷೇತ್ರದಲ್ಲಿ ಹೆಚ್ಚು ಮಹಿಳೆಯರು ದುಡಿಯುತ್ತಿರುವುದಕ್ಕೆ ಎರಡು ಕಾರಣಗಳನ್ನು ಕೊಡಬಹುದು. ಈ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗ ಅವಕಾಶ ಇದೆ. ಎರಡನೆಯದಾಗಿ ಮಹಿಳೆಯರು 'ಸೇವೆ' ಉದ್ಯೋಗದತ್ತ ಹೆಚ್ಚು ಆಕರ್ಷಿತರಾಗಬಹುದೆಂಬ ನಂಬಿಕೆ. ವಸ್ತು ತಯಾರಿಕೆ ಅಥವಾ ನಿರ್ಮಾಣ ಕ್ಷೇತ್ರಗಳಲ್ಲಿ ದೈಹಿಕ ದುಡಿಮೆ ಹೆಚ್ಚು. ಮಹಿಳೆಯರು ಅದನ್ನು ತೆಗೆದುಕೊಳ್ಳುವುದಿಲ್ಲವೆಂದು ಅರ್ಥೈಸಲಾಗದು. ಏಕೆಂದರೆ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆ ಗಮನಾರ್ಹವಾಗಿಯೇ ಇದೆ. ಕೃಷಿ ಕ್ಷೇತ್ರದಲ್ಲಂತೂ ಮಹಿಳೆಯರದೇ ಮೇಲುಗೈ. ವಿಷಾದನೀಯವೆಂದರೆ ಇಲ್ಲಿ ಸ್ಪಷ್ಟ ಅಂಕಿ ಸಂಖ್ಯೆ ದುರ್ಲಭ.

ಜಿಲ್ಲಾವಾರು ಅಂಕಿ ಸಂಖ್ಯೆಯನ್ನು ಗಮನಿಸಿದರೆ, ಬೆಂಗಳೂರು ಜಿಲ್ಲೆಯು ಅತ್ಯಧಿಕ ಮಹಿಳೆಯರಿಗೆ ಉದ್ಯೋಗ ನೀಡಿದೆ. ಸಂಘಟಿತ ವಲಯದ ಒಟ್ಟು ಮಹಿಳಾ ಉದ್ಯೋಗಿಗಳಲ್ಲಿ ಶೇಕಡ 31ರಷ್ಟು ಮಂದಿ ಬೆಂಗಳೂರು ಜಿಲ್ಲೆಯಲ್ಲಿಯೇ ಇದ್ದಾರೆ. ಎರಡನೆ ಸ್ಥಾನ ದಕ್ಷಿಣ ಕನ್ನಡ ಜಿಲ್ಲೆಯದು. ಈ ಜಿಲ್ಲೆಯಲ್ಲಿ ಅತಿ ಹೆಚ್ಚು ಅಕ್ಷರಸ್ಥ ಮಹಿಳೆಯರಿದ್ದಾರೆ (ಶೇಕಡ 45). ಉದ್ಯೋಗ ಅವಕಾಶವಿರುವ ಸಂಸ್ಥೆಗಳು ಎಲ್ಲಿ ಹೆಚ್ಚಾಗಿದೆಯೊ ಅಲ್ಲಿ ಉದ್ಯೋಗಸ್ಥರ ಸಂಖ್ಯೆ ಕೂಡ ಹೆಚ್ಚಾಗಿರುವುದು ಸಾಧ್ಯ. ಈ ಜಿಲ್ಲಾವಾರು ಅಂಕಿ ಸಂಖ್ಯೆಗಳಿಗೆ ಅವು ಆಧಾರ.

ಖಾಸಗಿ ಅವಕಾಶ

ದುಡಿಮೆ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆಯಲ್ಲಿ ಸುಧಾರಣೆ ಉಂಟುಮಾಡಲು ಕರ್ನಾಟಕವೂ ಸೇರಿದಂತೆ ರಾಷ್ಟ್ರದ ಅನೇಕ ಕಡೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಆದರೆ ಸಂಘಟಿತ ವಲಯದಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಗಮನಾರ್ಹವಾಗಿ ಏರುಮುಖ ಕಾಣಬೇಕಾದರೆ ಖಾಸಗಿ ಕ್ಷೇತ್ರದಲ್ಲಿ ಹೆಚ್ಚು ಅವಕಾಶ ಕಲ್ಪಿಸುವುದು ಅಗತ್ಯ. ಸರ್ಕಾರಿ ಕ್ಷೇತ್ರದಲ್ಲಿ ಮಹಿಳಾ ಉದ್ಯೋಗಿಗಳ ಪ್ರಮಾಣ ಒಂದು ಗತಿಯನ್ನಂತೂ ಮುಟ್ಟಿದೆ. ಮಹಿಳೆಯರಿಗೆ ಹೆಚ್ಚು ಉದ್ಯೋಗ ಅವಕಾಶ ಕಲ್ಪಿಸುವ ಗುರುತರ ಕಾರ್ಯವನ್ನು ಖಾಸಗಿ ಕ್ಷೇತ್ರ ಮಾಡಬೇಕಾಗಿದೆ. ಅದು ಕುಂಟು ನೆವಗಳನ್ನು ಹೇಳಕೊಳ್ಳಬಾರದಷ್ಟೆ.

['ಎಕನಾಮಿಕ್ಸ್ ಟೈಂಸ್' ನಲ್ಲಿ ಆಶಾ ರೈ ಅವರ ಲೇಖನ ಆಧಾರಿತ].

○

ರಾಷ್ಟ್ರೀಯ ಮಹಿಳಾ ಯೋಜನೆ — ಯಾರಿಗಾಗಿ?

ಕ್ರಿ.ಶ. 1988-2000 ರವರೆಗಿನ ಅವಧಿಗೆಂದು ರೂಪಿಸಲಾದ ರಾಷ್ಟ್ರೀಯ ಮಹಿಳಾ ಯೋಜನೆಯ ಕಣ್ಣೋಟವೇ (ಎನ್.ಪಿ.ಪಿ) ಕಳೆದ ವರ್ಷದಿಂದ ಚರ್ಚೆಯ ವಿಷಯ. ಇದನ್ನು ಭಾರತ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಡಿ ಮಹಿಳೆಯರು ಮತ್ತು ಮಕ್ಕಳ ಇಲಾಖೆಯು ರೂಪಿಸಿದೆ. 186 ಪುಟಗಳ ವರದಿಯನ್ನು ಹೊಂದಿರುವ ಈ ಯೋಜನೆಯ ವಿಷಯವನ್ನು ಹತ್ತು ವಿಭಾಗೀಕೃತ ಅಧ್ಯಾಯಗಳನ್ನಾಗಿ ಮಾಡಿದ್ದಾರೆ. ಅವು (1) ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿ (2) ಉದ್ಯೋಗ ಮತ್ತು ತರಬೇತಿ (3) ಬೆಂಬಲಿತ ಯೋಜನೆಗಳು (4) ಶಿಕ್ಷಣ (5) ಆರೋಗ್ಯ ಮತ್ತು ಕುಟುಂಬ ಕಲ್ಯಾಣ. (6) ಶಾಸನಗಳು (7) ರಾಜಕೀಯ ಭಾಗವಹಿಸುವಿಕೆ ಮತ್ತು ತೀರ್ಮಾನ ಕೈಗೊಳ್ಳುವುದು (8) ಮಾಧ್ಯಮ ಮತ್ತು ಸಂಪರ್ಕ (9) ಸ್ವಯಂ ಸೇವಾ ಕಾರ್ಯ (10) ಸಾಮಾನ್ಯ ಶಿಫಾರಸುಗಳು.

ಎನ್.ಪಿ.ಪಿಯನ್ನು ಕುರಿತು ಪೀಠಿಕೆಯಲ್ಲಿ, "....ಮಹಿಳೆಯರಿಗಾಗಿ ದೀರ್ಘಕಾಲಿಕ ಸಮಗ್ರ ಯೋಜನೆ" ಎಂದು ಹೇಳಿದ್ದು ಇದರ ಗುರಿಯು "....(1) ಆರ್ಥಿಕತೆಯ ಮುಖ್ಯವಾಹಿನಿಗೆ ಮಹಿಳೆಯರನ್ನು ಸಂಯೋಜಿಸುವುದು ಹಾಗೂ ಆರ್ಥಿಕ ಅಭಿವೃದ್ಧಿ, (2) ಎಲ್ಲಾ ಮಹಿಳೆಯರಿಗೂ ಸಮಾನ ಸಾಮಾಜಿಕ ನ್ಯಾಯ ಒದಗಿಸುವುದು" ಎನ್ನಲಾಗಿದೆ.

ಯೋಜನೆಯ ಶಿಫಾಸ್ಸುಗಳು.

ಮೊದಲಿಗೆ ಇಂದಿನ ಮಹಿಳೆಯರ ಪರಿಸ್ಥಿತಿಯನ್ನು ಕುರಿತ ಗುಣಾತ್ಮಕ ಬೆಳವಣಿಗೆಯನ್ನು, ಜೊತೆಗೆಯೇ ಅದರ ನೇತ್ಯಾತ್ಮಕ ಪರಿಸ್ಥಿತಿಯನ್ನು ಪರಿಚಯಿಸುವ ಅಂಕಿ ಸಂಖ್ಯೆಗಳನ್ನು ಕೊಟ್ಟು, 'ಅಸಮಾನ ಸ್ಥಾನ ಮಾನ'ಗಳನ್ನು ಹೊಂದಿರುವ ಮಹಿಳೆಯರ ಸ್ಥಿತಿಯನ್ನು ಬದಲಿಸಿ ಮಹಿಳೆಯರನ್ನು 'ಪ್ರಗತಿಯ ಮುಖ್ಯವಾಹಿನಿಗೆ' ತರಲು ಯೋಜನೆಯು ವಿಭಾಗೀಕೃತ 'ಶಿಫಾರಸ್ಸುಗಳನ್ನು' ಮಾಡುತ್ತದೆ. ಈ ಮಾದರಿಯ 338 ಶಿಫಾರಸ್ಸುಗಳಿದ್ದು, ಇವರಲ್ಲಿ 'ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿ' ಯಲ್ಲಿ 40 ಅಧ್ಯಾಯಗಳು, 'ಉದ್ಯೋಗ ಮತ್ತು ತರಬೇತಿ'ಯಲ್ಲಿ 85 ಅಧ್ಯಾಯಗಳು ಇವೆ.

ಇವುಗಳಲ್ಲದೆ 12 ಸಾಮಾನ್ಯ ಶಿಫಾರಸುಗಳೂ ಇವೆ. ಹೀಗೆ ಒಟ್ಟು 359 "ಶಿಫಾರಸುಗಳನ್ನು" ಎನ್.ಪಿ.ಪಿಯಲ್ಲಿ ಮಾಡಲಾಗಿದೆ. ಈ 350 ಶಿಫಾರಸುಗಳಲ್ಲಿ. ಜಾರಿಗೊಳಿಸುವ ವ್ಯವಸ್ಥೆಗೆ ಸಂಬಂಧಿಸಿ ಕಾರ್ಯತಃ ಶಿಫಾರಸುಗಳಲ್ಲಿ ಎನ್.ಪಿ.ಪಿಯು ಕಾನೂನು ಕ್ರಮಗಳ ಜಾರಿ ಹಾಗೂ ಮೇಲ್ವಿಚಾರಣೆಗೆ 'ಮಹಿಳಾ ಹಕ್ಕುಗಳ ಕಮೀಶನರ್' ರವರ ನೇಮಕಕ್ಕೆ ಶಿಫಾರಸು ಮಾಡಿದೆ. ಎಲ್ಲಾ ಸಚಿವಾಲಯಗಳಲ್ಲಿ ಹಾಗೂ ಯೋಜನಾ ಆಯೋಗಗಳಲ್ಲಿ ವಿಶೇಷ ಘಟಕಗಳ ರಚನೆಗೆ, ಸಚಿವಾಲಯಗಳ ನಡುವಿನ ಆಂತರಿಕ ಸಹಕಾರಕ್ಕೆ, ಸಮಾಜಕಲ್ಯಾಣ ಮಂಡಳಿಗಳು ಮತ್ತು ಮಹಿಳಾ ಅಭಿವೃದ್ಧಿ ಕಾರ್ಪೊರೇಷನ್‌ಗಳ ನಡುವಿನ ಜವಾಬ್ದಾರಿಗಳನ್ನು ಬೇರ್ಪಡಿಸಿ—ಮೊದಲನೆಯದಕ್ಕೆ ಕಲ್ಯಾಣದ ಜವಾಬ್ದಾರಿ ವಹಿಸಿ—ಎರಡನೆಯದು ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ನಿಗಾ ವಹಿಸುವಂತೆ ಮಾಡುವುದು, ಮಹಿಳೆಯರಿಗಾಗಿ ರಾಷ್ಟ್ರೀಯ ತರಬೇತಿ ಕೇಂದ್ರವೊಂದನ್ನು ಹಾಗೂ ಮಹಿಳೆಯರ ಬಗ್ಗೆ ಅಂಕಿ ಸಂಖ್ಯೆ ಸಂಗ್ರಹಿಸುವ ಹಾಗೂ ದಾಖಲಾತಿ ಇಡುವ ರಾಷ್ಟ್ರೀಯ ಕೇಂದ್ರವನ್ನು ಸ್ಥಾಪಿಸುವುದು.

ಯೋಜನೆಯ ನಿರ್ವಹಣೆ

12 ವರ್ಷಗಳ ಕಾಲ ಜಾರಿಯಲ್ಲಿರಬೇಕಾದ ಯೋಜನೆಯ ನಿರ್ವಹಣೆ, ಕಾರ್ಯರೂಪ ತೀರ ಅವ್ಯವಸ್ಥೆಯಿಂದ ಕೂಡಿದ್ದು ಪ್ರಜಾಸತ್ತೆಗೆ ವಿರೋಧಿಯಾಗಿದೆ. ವಿವಿಧ ವಿಭಾಗಗಳನ್ನು ರೂಪಿಸುವಲ್ಲಿ ನೆರವಾದ ತಜ್ಞರನ್ನು ಇಡೀ ಯೋಜನೆ ಅಂತಿಮಗೊಳಿಸುವಾಗ ಸಂಪರ್ಕಿಸಿ ಅಭಿಪ್ರಾಯ ಪಡೆಯಲಿಲ್ಲ. ಮಹಿಳೆಯರ ರಾಷ್ಟ್ರೀಯ ಸಲಹಾ ಸಮಿತಿಯ ಮುಂದೆ ಯೋಜನೆಯನ್ನು ಔಪಚಾರಿಕವಾಗಿ ಮಂಡಿಸ

ಲಾಯಿತು. ಈ ಸಮಿತಿಯು ಮಹಿಳೆಯರ ಬಗ್ಗೆ ಸರಕಾರವು ಹೊಂದಿರುವ ಅನುಕಂಪಕ್ಕೆ ಸಾಕ್ಷಿ ಎಂದು ಎನ್.ಪಿ.ಪಿಯಲ್ಲಿ ಹೇಳಿಕೊಂಡಿದೆ. ಆದರೆ ಮಹಿಳೆಯರ ರಾಷ್ಟ್ರೀಯ ಸಲಹಾ ಸಮಿತಿಗೆ ಈ ಯೋಜನೆಯನ್ನು ರೂಪಿಸುವ ಕಾರ್ಯದಲ್ಲಿ ಯಾವುದೇ ಪಾತ್ರವಹಿಸಲು ಅವಕಾಶ ಕೊಡಲಿಲ್ಲ. ಎಲ್ಲಾ ರಾಜ್ಯಗಳ ಸಮಾಜ ಕಲ್ಯಾಣ ಇಲಾಖೆಗಳ ಪ್ರತಿನಿಧಿಗಳ ಒಂದು ದಿನದ ಸಭೆಯನ್ನು ಕರೆಯಲಾಯಿತು. ಆದರೆ ಕರಡು ಯೋಜನೆ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕೆಂಬ ಇವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಮಹಿಳಾ ಸಂಘಟನೆಗಳ ಪ್ರತಿನಿಧಿಗಳ ಜಂಟಿಯು ಸರಕಾರವು ಈ ಯೋಜನೆಯನ್ನು ಅವಸರದಲ್ಲಿ ಜಾರಿ ಮಾಡಬಾರದಾಗಿ ಕೋರಿತು. ಬಹುಮುಖ್ಯವಾಗಿ ಪಾರ್ಲಿಮೆಂಟಿನಲ್ಲಿರುವ ಜನತೆಯ ಚುನಾಯಿತ ಪ್ರತಿನಿಧಿಗಳಿಗೆ ಇದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಯಾವುದೇ ಅವಕಾಶ ಕೊಡಲಾಗಲಿಲ್ಲ. ಆಯಾ ಸಚಿವಾಲಯಗಳ ಸಲಹಾ ಸಮಿತಿಗಳ ಸಭೆಗಳಲ್ಲಿ ಸೂಚಿಸಲಾದ ಹಲವಾರು ವಿಷಯ ಸೂಚಿಗಳಲ್ಲಿ ಇದೂ ಒಂದಾಗಿದ್ದು, ಇದರ ಮೇಲಿನ ಚರ್ಚೆಯನ್ನು ಕೇವಲ ಒಂದು ಗಂಟೆಯಲ್ಲಿ ಮುಗಿಸಲಾಯಿತು! ಆಳವಾದ ಚರ್ಚೆಗೆ ಅವಕಾಶವಿರಬೇಕೆಂಬ ಸದಸ್ಯರ ಕೋರಿಕೆಯನ್ನು ತಿರಸ್ಕರಿಸಲಾಯಿತು.

ಯೋಜನೆಗೆ ಹಣಸಂಚಯ

ಎನ್.ಪಿ.ಪಿಯನ್ನು ಕಾರ್ಯಗತಗೊಳಿಸಲು ಬೇಕಾದ ಹಣದ ವ್ಯವಸ್ಥೆಗೆ ವಿಶೇಷ ಪ್ರಯತ್ನ ಹೇಗೆ? ಎಂಬ ಪ್ರಶ್ನೆಗೆ ಉತ್ತರ ನಿರಾಶಾದಾಯಕ. ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ 2.4 ಶೇಕಡದಷ್ಟು ಹಣ ಮಾತ್ರ ಮಹಿಳೆಯರ ಅಭಿವೃದ್ಧಿಯ ವಿಶೇಷ ಯೋಜನೆಗಳಿಗೆಂದು ಮೀಸಲಾಗಿದೆ. ಆದರೆ ಈ ಹಣ ಎ.ಪಿ.ಪಿಯು ಹೇಳಿರುವ ಶಿಫಾರಸ್ಸುಗಳ ಜಾರಿಗೆ ಸ್ವಲ್ಪವೂ ಸಾಲುವುದಿಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವೆ ಮಾರ್ಗರೇಟ್ ಆಳ್ವರವರು ಯೋಜನೆ ಬಗ್ಗೆ ಮುನ್ನುಡಿಯಲ್ಲಿ "ಹೆಚ್ಚುವರಿ ಮೂಲವನ್ನಾಗಲೀ ಇಲ್ಲವೇ ವೆಚ್ಚವನ್ನಾಗಲೀ ಯೋಜನೆ ಬಯಸುವುದಿಲ್ಲ" ಎಂದಿದ್ದಾರೆ. ಆದರೆ ಇದು ವಾಸ್ತವವಾಗಿ ಒಂದು ದೊಡ್ಡ ಸುಳ್ಳಿನ ಕಂತೆ. ಇವುಗಳಲ್ಲಿ ಹತ್ತನೇ ಒಂದು ಭಾಗ ಜಾರಿಗೊಳಿಸಬೇಕಾದರೂ ಹೆಚ್ಚಿನ ಹಣಕಾಸಿನ ಬೆಂಬಲ ಬೇಕಾಗುತ್ತದೆ. ಒಂದು ಚಿಕ್ಕ ಉದಾಹರಣೆಯನ್ನು ಗಮನಿಸಬಹುದು :—

"30ಕ್ಕಿಂತಲೂ ಹೆಚ್ಚು ಕೆಲಸಗಾರರಿರುವ ಎಲ್ಲಾ ಕೆಲಸದ ಸ್ಥಳಗಳಲ್ಲಿ ಶಿಶುಪಾಲನಾ ಕೇಂದ್ರಗಳಿರುವಂತೆ ಅವುಗಳನ್ನು ಸಾರ್ವತ್ರೀಕರಿಸುವುದು. ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ಸಮಗ್ರ ಬಾಲ ವಿಕಾಸ ಯೋಜನೆ ಜಾರಿ ಇರುವ ಪ್ರದೇಶಗಳಲ್ಲಿ 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳನ್ನು ರೂಪಿಸುವುದು."

ಈಗ 2 ಲಕ್ಷ ಮಕ್ಕಳಿಗೆ ಮಾತ್ರ ಶಿಶುಪಾಲನಾ ಕೇಂದ್ರಗಳ ಸೌಲಭ್ಯವಿದೆ. ಎನ್.ಪಿ.ಪಿ. ರೀತ್ಯ ಪ್ರಸ್ತುತ 33 ಮಿಲಿಯ ಮಕ್ಕಳು ದುಡಿಯುವ ತಾಯಂದಿರನ್ನು ಹೊಂದಿದ್ದಾರೆ. ಅವರೆಲ್ಲರಿಗೂ ಶಿಶುಪಾಲನಾ ಕೇಂದ್ರಗಳು ಬೇಕಾದರೆ ಎಷ್ಟು ಹಣ ಬೇಕಾಗುತ್ತದೆ? ಪ್ರತಿಯೊಂದು ಶಿಶುಪಾಲನಾ ಕೇಂದ್ರಗಳೂ ಸರಾಸರಿ 50 ಮಕ್ಕಳನ್ನು ಹೊಂದಿದ್ದು—ತಿಂಗಳಿಗೆ ಕನಿಷ್ಠ ಒಂದು ಸಾವಿರ ರೂಪಾಯಿ ವ್ಯಯವಾದರೆ—ಈ ಒಂದು ಶಿಫಾರಸ್ಸು ಜಾರಿಯಾಗಬೇಕಾದರೆ ರೂ 7092 ಕೋಟಿ ಹಣ ಬೇಕಾಗುತ್ತದೆ. ಎಲ್ಲಾ ಶಿಫಾರಸ್ಸುಗಳ ಗತಿಯೂ ಇದೇ ರೀತಿಯದಾಗಿದೆ.

ಸರ್ಕಾರದ ನೀತಿ

ಎನ್.ಪಿ.ಪಿ. ಮಹಿಳಾ ಕಾರ್ಮಿಕರ ಸುಧಾರಣೆ ಬಗ್ಗೆ ಏನನ್ನೇ ಶಿಫಾರಸ್ಸು ಮಾಡಲು ಪ್ರಯತ್ನಿಸಲಿಲ್ಲ. ಅದಕ್ಕೆ ಬದಲು ಅಸಂಘಟಿತ ವಲಯದ 'ಸೇವಕಿ'ಯಂಥ ಉದ್ಯೋಗ ಕಾರ್ಯಸಾಧ್ಯ ಪರ್ಯಾಯ ಎಂದು ಪ್ರತಿಪಾದಿಸುತ್ತದೆ. ಪ್ರಾಥಮಿಕ ಕರಡಿನಲ್ಲಿ ಇದನ್ನು ನಿರ್ದಿಷ್ಟವಾಗಿ ಹೇಳಲಾಗಿತ್ತಾದರೂ ಮಹಿಳಾ ಸಂಘಟನೆಗಳ ಕಟು ವಿರೋಧದಿಂದಾಗಿ ಅಂತಿಮ ಯೋಜನಾ ದಾಖಲೆಯಿಂದ ಆ ವಾಕ್ಯವನ್ನು ತೊಡೆದು ಹಾಕಲಾಯಿತು. ಆದರೆ ಅದರ ಹಿಂದಿನ ಧೋರಣೆ ಮತ್ತು ಅಭಿಪ್ರಾಯ ಇನ್ನೂ ಬದಲಾಗಿಲ್ಲ.

ಎನ್.ಪಿ.ಪಿಯ ಪ್ರತಿಯೊಂದು ಶಿಫಾರಸುಗಳೂ ಕೇಂದ್ರೀಕರಣದ ಒಲವನ್ನು ಹೊಂದಿದೆ. ರಾಷ್ಟ್ರೀಯ ತರಬೇತಿ ಸಂಸ್ಥೆ, ರಾಷ್ಟ್ರೀಯ ಸಂಪನ್ಮೂಲ, ಕೇಂದ್ರ

ಮತ್ತು ಮಹಿಳಾ ಹಕ್ಕುಗಳ ಆಯೋಗ—ಯಾವುದೇ ಇರಲಿ, ಅವುಗಳಲ್ಲಿ ಸಂಕೀರ್ಣ ಹಾಗೂ ನಿರ್ಣಾಯಕವಾದ ಮಹಿಳೆಯರನ್ನು ವಿಶಾಲ ಪ್ರಮಾಣದಲ್ಲಿ ಒಳಗೊಳಿಸುವ ವಿಕೇಂದ್ರೀಕರಣದ ಅಂಶ ಇಲ್ಲವೇ ಇಲ್ಲ. ಎಲ್ಲಾ ಕಾರ್ಯಕ್ರಮಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವೇ ಕೇಂದ್ರವಾಗಿರಬೇಕೆಂಬ ಧೋರಣೆಯು ಕೇಂದ್ರೀಕರಣದ ಅಪಾಯಕಾರಿ ಆಯಾಮವಾಗಿದೆ.

ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಕೊರತೆಯ ಬಗ್ಗೆ ಎನ್.ಪಿ.ಪಿ. ಬಹುವಾಗಿ ವಿಷಾದಿಸಿದೆ. ಮಹಿಳಾ ಸಂಘಟನೆಗಳ ವಿಮರ್ಶೆಯನ್ನು ಅಂಗೀಕರಿಸಿರುವ ಅದು, ರಾಜಕೀಯ ಭಾಗವಹಿಸುವಿಕೆಯು ಮಹಿಳೆಯರ ವ್ಯಾಪಕ ಚಟುವಟಿಕೆಗಳು ಮತ್ತು ಶಾಸಕಾಂಗಗಳ ಹೊರಗಿನ ಹೋರಾಟಗಳಲ್ಲಿ ಭಾಗವಹಿಸುವುದೂ ಒಳಗೊಂಡಿರುತ್ತದೆ, ಎಂಬ ಅಭಿಪ್ರಾಯವನ್ನು ಹೊಂದಿದೆ. ಆದರೆ 'ಎಲ್ಲಾ ರಾಜಕೀಯ ಪಕ್ಷಗಳು' ಮಹಿಳೆಯರನ್ನು ಅಲಕ್ಷಿಸಿದ್ದು ಸ್ವಾಯುತ್ತ ಮಹಿಳಾ ಗುಂಪುಗಳ ಮೂಲಕ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಮಹಿಳಾ ಸಂಘಟನೆಗಳಿಗೆ ಪರ್ಯಾಯ ಎಂಬುದು ಎನ್.ಪಿ.ಪಿ.ಯ ವಿಶ್ಲೇಷಣೆಯ ಸಾರವಾಗಿದೆ. ಆದರೆ ಈ ವಿಶ್ಲೇಷಣೆ ಮಹಿಳಾ ಹೋರಾಟದ ಅವೈಜ್ಞಾನಿಕ ವಿಶ್ಲೇಷಣೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಯೋಜನೆಯ ನಿರ್ಲಕ್ಷ್ಯ

ಮಹಿಳೆಯರ ನಡುವೆ ನಿಜಕ್ಕೂ ಕೆಲಸ ನಿರ್ವಹಿಸಿ ಅನುಭವವಿರುವ ಮಹಿಳಾ ಸಂಘಟನೆಗಳನ್ನು ಈ ಯೋಜನೆಯ ಬಗ್ಗೆ ಯಾವುದೇ ಹಂತದಲ್ಲಿ ಸಂಪರ್ಕಿಸುವ ಇಲ್ಲವೇ ಒಳಗೊಳ್ಳುವಂತೆ ಮಾಡಲಾಗಲಿಲ್ಲವೆನ್ನುವುದು ಆಶ್ಚರ್ಯದ ಅಂಶವಲ್ಲ. ಅಷ್ಟೇ ಅಲ್ಲ ರಾಷ್ಟ್ರೀಯ ಚರ್ಚೆಗೂ ಅವಕಾಶ ನೀಡದೆ ಭಾರತ ಸರ್ಕಾರವು ಈ ಯೋಜನೆಯನ್ನು ಅಂತಿಮಗೊಳಿಸಿದೆ.

ಎನ್.ಪಿ.ಪಿ.ಯನ್ನು ವಿರೋಧಿಸುವುದು 'ತಾಂತ್ರಿಕ' ಕಾರಣಗಳಿಗಾಗಲೀ ಅಥವಾ ಪ್ರಜಾಪ್ರಭುತ್ವ ವಿರೋಧಿ ಪ್ರತಿಭಟನೆಯ ಕಾರ್ಯಕ್ರಮವಾಗಲೀ ಅಲ್ಲ. ಚರ್ಚೆ ನಡೆಯದೇ ಇರುವ ಪರಿಣಾಮ ಹಾಗೂ ವಿಶಾಲವಾದ ಜನಾಭಿಪ್ರಾಯವನ್ನು ಪಡೆಯಲು ಸರ್ಕಾರ ತಿರಸ್ಕರಿಸಿದ ಪರಿಣಾಮವನ್ನು ಯೋಜನೆಯ ಯಶಸ್ಸಿಗೆ ಸಂಬಂಧಿಸಿದುದೇ ಆಗಿದೆ. ವಿವಿಧ ತಾತ್ವಿಕ ಹಿನ್ನೆಲೆ ಮತ್ತು ಕಣ್ಣೋಟಗಳನ್ನು ಹೊಂದಿರುವ ಮಹಿಳಾ ಸಂಘಟನೆಗಳು ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ದೆಹಲಿಯಲ್ಲಿ ಜಂಟಿ ಸಮಾವೇಶವೊಂದನ್ನು ನಡೆಸಿ ಅಲ್ಲಿ ಎನ್.ಪಿ.ಪಿ.ಯ ವಿವಿಧ ವಿಭಾಗಗಳ ಬಗ್ಗೆ ದೀರ್ಘವಾಗಿ ವಿಶ್ಲೇಷಿಸಿ ಹಲವಾರು ಶಿಫಾರಸ್ಸುಗಳನ್ನು ನೀಡಿದವು ಎನ್ನುವುದು ಮಹತ್ವದ ವಿಚಾರವಾಗಿದೆ. ಆದರೆ ಸರ್ಕಾರ ಯೋಜನೆಯನ್ನು ಅಂತಿಮಗೊಳಿಸುವಾಗ ಈ ಟಿಪ್ಪಣಿಯನ್ನು ಕೂಡ ತತ್ವಶಃ ಮಾನ್ಯ ಮಾಡಲಿಲ್ಲ.

ಯೋಜನೆ ಯಾರಿಗಾಗಿ?

'ಇದೊಂದು ಯೋಜನೆಯಲ್ಲ—ಇದು ಚುನಾವಣಾ ವೇದಿಕೆ'—ಎನ್.ಪಿ.ಪಿ.ಯನ್ನು ಕುರಿತ ಸಾರ್ವತ್ರಿಕ ಅಭಿಪ್ರಾಯ ಇದು. ಕರಡು ರೂಪಿಸುವಲ್ಲಿ ಭಾಗವಹಿಸಿದ ವಿದ್ವಾಂಸರ ತೀವ್ರಶ್ರಮ, ಪ್ರಾಮಾಣಿಕತೆ ಹಾಗೂ ಉತ್ತಮ ಉದ್ದೇಶಗಳನ್ನು ಹೊಂದಿದ್ದರೂ ಎನ್.ಪಿ.ಪಿ. ಮಹಿಳಾ ಮತಗಳಿಕೆಯ ಅಸ್ತ್ರವೆನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಚುನಾವಣಾ ಪ್ರಚಾರದಲ್ಲಿ ಆಳುವ ಕಾಂಗ್ರೆಸ್(ಐ) ಎನ್.ಪಿ.ಪಿ.ಯನ್ನು ಮಹಿಳಾ ಉದ್ಧಾರದ ಕುರಿತ ತನ್ನ ಕಳಕಳಿಯ ಬಗ್ಗೆ ಸಾಕ್ಷಿಯಾಗಿ ಬಳಸುವ ಎಲ್ಲಾ ಸಾಧ್ಯತೆಗಳಿವೆ. ○

ಸ್ಪಂದನ

ಯಾರಿಗೆ ಉನ್ನತ ಶಿಕ್ಷಣ

ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಉನ್ನತ ಶಿಕ್ಷಣ ಪಡೆಯುತ್ತಿದ್ದರೂ ಪುರುಷರ ಸಂಖ್ಯೆಗಿಂತ ಅವರ ಸಂಖ್ಯೆ ಕಡಿಮೆ ಎಂಬುದು ವಾಸ್ತವಾಂಶ. ಈ ಸಂದರ್ಭದಲ್ಲಿ ಯೋಜನಾ ಇಲಾಖೆ ಕರ್ನಾಟಕದಲ್ಲಿ ಮಹಿಳಾ ಉದ್ಯೋಗ ಕುರಿತಂತೆ ಸಿದ್ಧಪಡಿಸಿರುವ ಪ್ರಬಂಧವೊಂದರಲ್ಲಿನ ಅಂಕಿ ಅಂಶಗಳನ್ನು ಗಮನಿಸುವುದು ಅಗತ್ಯ.

1985–86ರಲ್ಲಿ ವಿವಿಧ ಕಾಲೇಜುಗಳಲ್ಲಿ ಆರ್ಟ್ಸ್ ವಿಭಾಗಕ್ಕೆ ಸೇರಿದ್ದ ಪುರುಷರ ಸಂಖ್ಯೆ 88,446 ಇದ್ದರೆ ಮಹಿಳೆಯರ ಸಂಖ್ಯೆ 39,800 ಮಾತ್ರ. 1977–78ರ ಅಂಕಿ–ಅಂಶಗಳನ್ನು ಗಮನಿಸಿ—37,143 ಪುರುಷರು ಆರ್ಟ್ಸ್ ತರಗತಿಗಳಿಗೆ ಸೇರಿದ್ದರೆ ಅದೇ ಅವಧಿಯಲ್ಲಿ ಕೇವಲ 20,313 ಮಹಿಳೆಯರು ಅದೇ ವಿಭಾಗಕ್ಕೆ ಸೇರಿಕೊಂಡಿದ್ದರು.

ಇನ್ನು ತಾಂತ್ರಿಕ ಶಿಕ್ಷಣ, ಎಂಜನಿಯರಿಂಗ್ ಮತ್ತು ಟೆಕ್ನಾಲಜಿ ಕೋರ್ಸುಗಳ ಪ್ರವೇಶ ಗಮನಿಸಿದರೆ, 1977–78ರಲ್ಲಿ 11,218 ಪುರುಷರು ಮತ್ತು 364 ಮಹಿಳೆಯರು ತಾಂತ್ರಿಕ ಶಿಕ್ಷಣ ಪ್ರವೇಶ ಪಡೆದಿದ್ದರು. 1985–86ರಲ್ಲಿ ಅದು ಕ್ರಮವಾಗಿ 39,114 ಮತ್ತು 2,031 ಇದ್ದಿತು.

ಪ್ರಬಂಧದಲ್ಲಿ ಸೂಚಿಸಿರುವ ಮತ್ತೊಂದು ಗಮನಾರ್ಹ ಅಂಶವೆಂದರೆ ಪರೀಕ್ಷೆಗಳಲ್ಲಿ ಮಹಿಳೆಯರದೇ ಮೇಲುಗೈ. ಪಾಸಾಗುವವರಲ್ಲಿ ಅವರ ಸಂಖ್ಯೆ ಹೆಚ್ಚಾಗಿದ್ದರೂ, ಉನ್ನತ ಶಿಕ್ಷಣಕ್ಕೆ ಸೇರುವುದರಲ್ಲಿ ಮಾತ್ರ ಪುರುಷರದೇ ಮೇಲುಗೈ.

ಇದಕ್ಕೇನು ಕಾರಣ? ಮಹಿಳೆಯರಿಗೆ ಶಿಕ್ಷಣದಲ್ಲಿ ಆಸಕ್ತಿ ಇಲ್ಲವೇ? ಆಸಕ್ತಿ ಇರುವುದರಿಂದಲೇ ಪಾಸಾಗುವವರಲ್ಲಿ ಮೇಲುಗೈ ಸಾಧಿಸಿರುವುದು. ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸುವುದೇ ಕಷ್ಟ. ಇನ್ನು ಉನ್ನತ ಶಿಕ್ಷಣ ಮರೀಚಿಕೆಯಷ್ಟೆ. ಮನೇಲಿ ಮಕ್ಕಳನ್ನು ನೋಡಿಕೊಳ್ಳಲಿ ಹೊಲದಲ್ಲಿ ದುಡೀಲಿ, ಕಟ್ಟಡ ನಿರ್ಮಾಣದಲ್ಲಿ ಮಣ್ಣು ಹೊರಲಿ; ಇವೇ ಮುಂತಾದ ವಾದಗಳುಂಟು. 'ಹೆಚ್ಚು ಓದಿಬಿಟ್ಟರೆ ಗಂಡೆಲ್ಲಿ ಸಿಗುತ್ತಾನೆ' ಎಂಬುದು ಮಧ್ಯಮ ವರ್ಗದ ವಾದವಿರಬಹುದು. ಆದರೆ ದುರ್ಬಲವರ್ಗದಲ್ಲಿ ಮಾತ್ರ ಆರ್ಥಿಕ ದುಃಸ್ಥಿತಿಯೇ ಪ್ರಮುಖ ಕಾರಣ. ಎರಡು ಹೊತ್ತು ಊಟ ಸಿಗಲು ಪರದಾಡುವ ದುರ್ಬಲ ವರ್ಗದ ಜನರು ದುಡಿಯಲು ಎರಡು ಕೈ ದೊರೆಯುವುದಿಲ್ಲ ಎಂದು ಭಾವಿಸುತ್ತಾರೆ, ಶಿಕ್ಷಣ, ಓದು ಇತ್ಯಾದಿಗೆಲ್ಲಿ ಪುರಸೊತ್ತು?

○ ಉಷಾ

ಈ ಸಂದರ್ಭದಲ್ಲಿ ಸರ್ಕಾರದ ಧೋರಣೆಯೇ ಎಲ್ಲಕ್ಕೂ ಕಾರಣ ಎಂದು ಹೇಳಿದರೆ ಅತಿಶಯೋಕ್ತಿ ಏನಲ್ಲ. ಜವಾಹರ್ ರೋಜ್‌ಗಾರ್ ಯೋಜನೆ, ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಇವೇ ಮುಂತಾದ ಯೋಜನೆಗಳನ್ನು ರೂಪಿಸುವ ಸರ್ಕಾರ ಅವುಗಳ ಜಾರಿಗಂತೂ ಗಮನ ಕೊಡುವುದಿಲ್ಲ. ಜತೆಗೆ ಸಾಮಾನ್ಯ ಪ್ರಜೆ ಶಿಕ್ಷಿತನಾಗುವುದು ಅದಕ್ಕೆ ಬೇಕಾಗಿಲ್ಲ. ಶಿಕ್ಷಿತ ಪ್ರಜೆ ಮತದಾನ ಮಾಡುವಾಗ ಚಿಂತನಶೀಲನಾಗಿಬಿಡಬಹುದು. ಹೀಗಾಗಿ ಸರ್ಕಾರವು ತನ್ನ 'ಮತ ಬ್ಯಾಂಕ್' ಸಾಧ್ಯವಾದಷ್ಟು ಅಶಿಕ್ಷಿತವಾಗಿ, ಆರ್ಥಿಕವಾಗಿ ದುರ್ಬಲವಾಗಿಯೇ ಉಳಿಯುವಂತೆ ಪ್ರಯತ್ನಿಸುತ್ತದೆ. ಇದು ಕಟು ಸತ್ಯ. ಜನರ ಸಂಘಟನೆಯೊಂದೇ ಇದಕ್ಕೆ ಮದ್ದು. ಜತೆಗೆ ಶಿಕ್ಷಿತ ಜನರು ಮುಗ್ಧ ಜನರಲ್ಲಿ ತಿಳುವಳಿಕೆ ಮೂಡಿಸುವ ಗುರುತರ ಜವಾಬ್ದಾರಿ ಹೊರಬೇಕು.



ಜಾಹಿರಾತಿನಲ್ಲಿ ಹೆಣ್ಣು : ಕೆಲವು ಪ್ರಶ್ನೆಗಳು

○ ಡಾ॥ ವಿಜಯಾ ದಬ್ಬೆ

ಇವು ಜಾಹಿರಾತಿನ ದಿನಗಳು. 'ಸರ್ವಂ ಬ್ರಹ್ಮಮಯಂ ಇದಂ ಜಗತ್' ಎಂದವರನ್ನು ಎದುರಿಸಿದ ಪ್ರತಿವಾದಿ ಭಯಂಕರರಿದ್ದರು. ಆದರೆ 'ಸರ್ವಂ ಜಾಹೀರ್ಮಯಂ ಇದಂ ಜಗತ್' ಎನ್ನುವವರನ್ನು ಅಲ್ಲಗಳೆಯುವ ಪ್ರತಿ ಸ್ಪರ್ಧಿ ಸಿಂಹಗಳಿನ್ನು ಹುಟ್ಟಬೇಕಾಗಿದೆ. ಜಾಹೀರು ಮಾಡಬಲ್ಲವನಿಗೆ ಸೋಲಿಲ್ಲ. ಜಾಹೀರು ಮಾಡಲಾಗದವನಿಗೆ ಗೆಲುವಿಲ್ಲ ಎಂಬುದೇ ಇಂದು ಬಹುತೇಕ ಕ್ಷೇತ್ರಗಳ ಸೂತ್ರ. ಎಂಥ ಕಳಪಿನ ಸರಕಿಗೂ ಬಣ್ಣ ಬಣ್ಣದ ಜಾಹಿರಾತು. ಭಾರತದಲ್ಲಿ ವರ್ಷಕ್ಕೆ ಸು.200ರಿಂದ 250 ಕೋಟಿ ರೂಪಾಯಿಗಳು ಜಾಹಿರಾತಿಗೆ ಖರ್ಚಾಗುತ್ತಿದ್ದ ಕಾಲವೊಂದಿತ್ತು. ಈಗ ಪ್ರಸಾರ ಮಾಧ್ಯಮಗಳು ಹೆಚ್ಚುತ್ತಿವೆ. ಜಾಹಿರಾತಿನ ಪ್ರಮಾಣ, ವೈವಿಧ್ಯಗಳೂ ಹೆಚ್ಚುತ್ತಿವೆ. ದೂರದರ್ಶನದ ಜಾಹಿರಾತಿನ ಸೆಕೆಂಡುಗಳು ಲಕ್ಷಾಧಿಪತಿಗಳಾಗಿರುವ ಕಾಲಕ್ಕೆ ಬಂದಿದ್ದೇವೆ.

ಪ್ರಚಾರ, ಜಾಹಿರಾತುಗಳು ಹೊಸವಲ್ಲ, ತಾನು ಒಪ್ಪಿದ್ದನ್ನು, ತಾನು ನಂಬಿದ್ದನ್ನು ಆಕರ್ಷಕವಾಗಿ ಹೇಳಿ ಜನಮನವನ್ನು ತನ್ನೆಡೆಗೆ ಸೆಳೆದುಕೊಳ್ಳುವ, ತನ್ನ ಗುಂಪನ್ನು ಹಿರಿದಾಗಿಸಿಕೊಳ್ಳುವ ಬಯಕೆ, ಕಲೆ ಹಳೆಯದು. ಧರ್ಮಾಸಕ್ತರು ಶಾಸನಗಳ ಮೂಲಕ, ಆಕರ್ಷಕ ಕಥೆಗಾರಿಕೆಯ ಮೂಲಕ, ಅನೇಕ ಕಲೆಗಳ ಮೂಲಕ ತಮ್ಮ ಧರ್ಮವನ್ನು ಪ್ರಚುರ ಪಡಿಸಲು ಹಾತೊರೆಯಲಿಲ್ಲವೆ? ನಮ್ಮ ಎಷ್ಟೋ ಕಾವ್ಯಗಳನ್ನು ಜಾಹಿರಾತು ಕಾವ್ಯಗಳೆನ್ನಬಹುದು. ಈಗಲೂ ಧಾರ್ಮಿಕ, ರಾಜಕೀಯ, ವೈಚಾರಿಕ ಸಿದ್ಧಾಂತಗಳನ್ನು ಜಾಹೀರುಗೊಳಿಸುವ ಪ್ರಯತ್ನಗಳು ಮುಂದುವರಿಯುತ್ತಲೇ ಇವೆ. ಆದರೆ ಸದ್ಯಕ್ಕೆ, ಈ ಟಿಪ್ಪಣಿ ಲೌಕಿಕ ಸರಕುಗಳ ಜಾಹಿರಾತಿನ ವೈಖರಿಯ ಕೆಲವು ಅಂಶಗಳ ಬಗ್ಗೆ, ಅದರಲ್ಲೂ ಹೆಣ್ಣನ್ನು ಜಾಹಿರಾತುಗಳು ಬಳಸಿಕೊಳ್ಳುತ್ತಿರುವುದರ ಬಗೆಗೂ ನನಗಿರುವ ಕೆಲವು ಅನುಮಾನಗಳನ್ನು ಮಾತ್ರ ಹೇಳಲು ಹೊರಟಿದೆ.

ಜಾಹಿರಾತು ಈ ಯುಗದ ಒಂದು ಅಗತ್ಯ. ಉತ್ಪಾದನೆಗೊಂಡ ಪ್ರತಿಯೊಂದು ವಸ್ತುವೂ ತಾನಿದ್ದೇನೆಂಬುವನ್ನು ಗ್ರಾಹಕರಿಗೆ ಕೂಗಿ ಹೇಳಿ ತನ್ನೆಡೆಗೆ ಅವರ ಗಮನವನ್ನು ಸೆಳೆದುಕೊಳ್ಳಬೇಕಾಗಿದೆ. ಎಷ್ಟೋ ಬಸ್ ನಿಲ್ದಾಣಗಳಲ್ಲಿ ಕಿಕ್ಕಿರಿದ ಜಾಹಿರಾತು ಹಲಗೆಗಳ ಮಧ್ಯೆ ಹೊಸಬರು ನಿಲ್ದಾಣದ ಹೆಸರ ಹಲಗೆಯನ್ನು ಹುಡುಕಬೇಕಾಗುವಂತೆ ಈ ಕೂಗಾಟ ರಭಸದಿಂದ ಸಾಗಿದೆ. ಜನರ ಭಾವನೆಗಳನ್ನು ಗೆದ್ದು ತನ್ನ ಸರಕನ್ನು ಸಾಗಹಾಕಬೇಕಾಗಿರುವ ಉದ್ಯಮಿ ತನ್ನ ಜಾಹಿರಾತನ್ನು ಆದಷ್ಟು ಆಕರ್ಷಕವಾಗಿ ಮಾಡುವತ್ತಲೇ ತನ್ನ ಕಣ್ಣಿಟ್ಟಿರುತ್ತಾನೆ. ಹೆಣ್ಣಿನ ದೈಹಿಕ ಆಕರ್ಷಣೆ ಈ ಆಕರ್ಷಕತೆಯನ್ನು ಉಂಟುಮಾಡಿದರೆ, ಹೆಚ್ಚಿಸಿದರೆ ಅವನೇಕೆ ಬೇಡವೆಂದಾನು. ಸರಿ, ವಸ್ತು ಯಾವುದೇ ಇರಲಿ ಅದರ ಪ್ರಚಾರಕ್ಕೆ ಒಬ್ಬ ಹೆಂಗಸು. ಕೂದಲಿನ ಸಂರಕ್ಷಣೆಗಾಗಿ ಬಳಸಿ ಎನ್ನಲಾದ ಒಂದು ಬ್ರ್ಯಾಂಡಿನ ಸ್ಪೆಷಲ್ ಸೀಗೇಕಾಯಿ ಪುಡಿಗಷ್ಟೇ ಅಲ್ಲದೆ ಶಾವಿಗೆಯ ಜಾಹೀರಾತಿಗೂ ಹೆಂಗಸಿನ ನಗ್ನವಾದ ಭುಜ, ಬೆನ್ನು ಬಳಕೆಯಾಗುತ್ತದೆ. ಶಾವಿಗೆಯ ರುಚಿಯ ಶ್ರೇಷ್ಠತೆಯನ್ನು ಈ ತೆರೆದ ಭುಜ, ಬೆನ್ನುಗಳ ಮೂಲಕ ತಿಳಿಯಬೇಕೆ ? ಮೆಕರೋನಿಯದೋ ಬಲ್ಬಿನದೋ ಲಾಟರಿಯದೋ ಯಾವ ಜಾಹಿರಾತಾದರೇನಂತೆ ಒಂದು ಹೆಣ್ಣಿನ ಮುಖ ಅಲ್ಲಿದ್ದರೆ ಸರಿ. ನಮ್ಮ ಸಾಬೂನುಗಳ ಜಾಹಿರಾತುಗಳಿಗೆ ಗಂಡಸರ, ಮಕ್ಕಳ ಆರೋಗ್ಯಕರ ಚರ್ಮ ಕಣ್ಣಿಗೆ ಬೀಳುವುದಕ್ಕಿಂತಲೂ ಬೇಗ ಹೆಣ್ಣಿನ ಚರ್ಮವೇ ಬೀಳುವುದು ಆಶ್ಚರ್ಯದ ಸುದ್ದಿಯಲ್ಲ. ಜಾಹಿರಾತು ಪ್ರಪಂಚದಲ್ಲಿ ಗಂಡಿಗಾಗಿರುವ ಈ ಅನ್ಯಾಯವನ್ನು ಗಂಡಸರು ಎಂದಾದರೂ ಪ್ರತಿಭಟಿಸಬಹುದು.

ಕುಂಕುಮದ, ಸೀರೆಯ, ಕೇರ್‌ಫ್ರೀಯ ಮತ್ತಿತರ ಮಹಿಳೆಯರಿಗೇ ಸಂಬಂಧಿಸಿದ ವಸ್ತುಗಳ ಜಾಹಿರಾತಿಗೆ ಮಹಿಳೆಯರ ಚಿತ್ರಗಳನ್ನು ಬಳಸಿಕೊಳ್ಳುವುದು ನಮಗೆ ಅರ್ಥವಾಗುವ ಸಂಗತಿ. ಆದರೆ ಪುರುಷರ ಒಳ ಉಡುಪುಗಳ, ಕ್ಷೌರದ ಮತ್ತಿತರ ವಸ್ತುಗಳ ಜಾಹಿರಾತಿನಲ್ಲಿಯೂ ಒಂದು ಆಕರ್ಷಕ ಮೈಮಾಟದ ಹೆಣ್ಣಿರಬೇಕೆಂಬುದು ಲಾಭದಲ್ಲಿ ಕಣ್ಣಿಟ್ಟ ಒಬ್ಬ ಉದ್ಯಮಿಗೆ ಸಂಗತವಾಗಿಯೇ ಕಾಣುತ್ತದೆ. ಸಿಗರೇಟನ್ನು ಸೇದುವ ಗಂಡಸನ್ನು ನೋಡಲೂ ಜಾಹಿರಾತಿನಲ್ಲಿ ಒಂದು ಹೆಣ್ಣಿರಬೇಕು—ಗಂಡಸಿನ ಪ್ರಪಂಚ ಇಷ್ಟು ಪರಾಧೀನವಾಗಿದೆಯೇ ?

ಜಾಹಿರಾತಿನ ಪ್ರಪಂಚದ ತುಂಬ ಹೀಗೆ ಹೆಚ್ಚಾಗಿ ಮಹಿಳೆಯರೇ ತುಂಬಿಕೊಂಡಿದ್ದರೂ ಕೆಲವು ಮಹಿಳೆಯರು ಮಹಿಳಾ ಸಂಘಟನೆಗಳು ಯಾಕೆ ಅತೃಪ್ತಿಯ ದನಿಯನ್ನು ಎತ್ತಿವೆ? ವಿರೋಧವನ್ನು ವ್ಯಕ್ತಪಡಿಸುತ್ತಿವೆ? ನನಗೆ ಕಾಣುವಂತೆ ಎರಡು ಪ್ರಮುಖ ಕಾರಣಗಳಿಂದ ಜಾಹಿರಾತಿನಲ್ಲಿ ಹೆಣ್ಣು ಬಳಕೆಯಾಗುತ್ತಿರುವ ರೀತಿಯನ್ನು ವಿರೋಧಿಸಲಾಗುತ್ತಿದೆ. ಮೊದಲನೆಯದಾಗಿ ಹೆಣ್ಣಿನ ದೈಹಿಕ ಆಕರ್ಷಣೆಯನ್ನು ಮಾತ್ರ ಎತ್ತಿ ಹಿಡಿಯುವಿಕೆ ಕೆಲವು ಮಾರಕ ಪರಿಣಾಮಗಳನ್ನೂ ಉಂಟುಮಾಡಬಹುದು. ಮನುಷ್ಯನ ವ್ಯಕ್ತಿತ್ವದ ಒಂದು ಭಾಗವಾಗಿ ಕಾಮವನ್ನು ಕಾಣುವುದು ಬೇರೆ, ಹೆಣ್ಣಿನ ಇಡೀ ವ್ಯಕ್ತಿತ್ವದ ಅಸ್ತಿತ್ವವನ್ನು ಇಷ್ಟಕ್ಕಿಳಿಸುವುದು ಬೇರೆ. ಚರಿತ್ರೆಯ ಅನೇಕ ಮಜಲುಗಳಲ್ಲಿ ಅನೇಕ ಕಾರಣಗಳಿಂದಾಗಿ ಹೆಂಗಸಿನ ವ್ಯಕ್ತಿತ್ವದ ಸಮಗ್ರತೆಯನ್ನು ಗ್ರಹಿಸದ, ಬಯಸದ ಸಮಾಜ ಅವಳ ಬೆಳವಣಿಗೆಯನ್ನು ಹತ್ತಿಕ್ಕಿ ತನ್ನ ಮತ್ತು ಅವಳ ಬೆಳವಣಿಗೆಯ ತಲೆಯ ಮೇಲೆ ಕಲ್ಲೆಳೆದಿತು, ಎಳೆದುಕೊಂಡಿತು. ಈ ಅವನತಿಯಿಂದ ಎಚ್ಚೆತ್ತುಕೊಂಡು ಮಹಿಳೆ ತನ್ನ ಘನತೆಯೊಂದಿಗೆ ಮತ್ತೆ ಸಮಾಜ ಹಾಗೂ ಚರಿತ್ರೆಯಲ್ಲಿ ತನ್ನನ್ನು ಸ್ಥಾಪಿಸಿಕೊಳ್ಳಬೇಕಾಗಿರುವ ಈ ಸಂದರ್ಭದಲ್ಲಿ ಕಾಮ ಪ್ರಚೋದನೆಗೇ ಒತ್ತು ಬೀಳುವಂತೆ ಹೆಣ್ಣಿನ ತೆರೆದ ಮೈಯನ್ನು ಮಾತ್ರ ಹೆಚ್ಚಾಗಿ ಜಾಹಿರಾತುಗಳು ಬಳಸಿಕೊಳ್ಳುವುದು ಸಂಘಟನೆಗಳ, ವಿಚಾರಪರರ ಉದ್ದೇಶಿತ ಪ್ರಗತಿಗೆ ಪೂರಕವಾಗಿಲ್ಲ. ಈ ಹಿನ್ನೆಲೆಯಿಂದ ಈ ರೀತಿಯ ಜಾಹಿರಾತುಗಳ ಬಗೆಗೆ ಬಂದ ವಿರೋಧಕ್ಕೆ ವಿರೋಧವೂ ಮಹಿಳೆಯರಿಂದ ಬಂದಿದೆ. ಗಂಡುಗಳು ಪ್ರದರ್ಶಿತರಾಗುವುದಕ್ಕೆ 'ಎಂದಾದರೂ ಆಕ್ಷೇಪ ಬಂದಿದೆಯೇ' ಎಂಬುದು ಅಂಥ ಒಂದು ಪ್ರಶ್ನೆ. ಈಗಾಗಲೇ ಪ್ರಸ್ತಾಪಿಸಿದಂತೆ ಹೆಣ್ಣಿನ ಸಮಗ್ರ ವ್ಯಕ್ತಿತ್ವದ ಸ್ವೀಕಾರದ ಬಗೆಗೆ ಇರುವ ನಿರ್ದಿಷ್ಟ ಚಾರಿತ್ರಿಕ ಹಿನ್ನೆಲೆಯಿಂದಾಗಿ ಜಾಹಿರಾತಿನ ಹೆಣ್ಣಿನ ಮೈ ಪ್ರದರ್ಶನವೆಂಬುದು ನೇರವಾಗಿ ಕಾಣುತ್ತಿರುವ ಸಂಗತಿ. ಎತ್ತುತ್ತಿರುವ ಪ್ರಶ್ನೆಯಾಚೆಗಿನ ಸಂಗತಿಗಳನ್ನು ಧ್ವನಿಸುತ್ತಿದೆ; ಉಪ ಪರಿಣಾಮಗಳನ್ನೂ ಬೀರುತ್ತಿದೆ. ಈಗಾಗಲೇ ಸ್ತ್ರೀಯನ್ನು ಕಾಣುತ್ತಿರುವ ದೃಷ್ಟಿಯಲ್ಲಿ ತಪ್ಪಿರುವ ಸಮತೋಲನದ, ಆರೋಗ್ಯದ ದೃಷ್ಟಿಯಿಂದ ಇಂಥ ಜಾಹಿರಾತುಗಳನ್ನು ಹೇಗೆ ಕಾಣಬೇಕು? ಆದ್ದರಿಂದ ಹೆಣ್ಣಿನ ತೆರೆದ ಮೈನ ಪ್ರದರ್ಶನದ ಬಗೆಗಿನ ಆಕ್ಷೇಪ ಕೇವಲ ನೀತಿಯ ಸನಾತನ ಸ್ವರೂಪಕ್ಕೆ ಸಂಬಂಧಿಸಿಲ್ಲ ಎಂದು ತೋರುತ್ತದೆ ಹಾಗೂ ಗಂಡಸಿನ ಮೈ ಪ್ರದರ್ಶನಕ್ಕಿಂತಲೂ ಬೇರೆಯಾದ ಅರ್ಥಗಳನ್ನು ಹೆಂಗಸಿನ ಮೈ ಪ್ರದರ್ಶನವೆಂಬುದು ಹೊರಡಿಸುತ್ತದೆ ಹಾಗೂ ವಿಭಿನ್ನ ಪರಿಣಾಮವನ್ನೂ ಬೀರುತ್ತಿದೆ.

ಇಂದಿನ ಜಾಹಿರಾತು ಹೆಣ್ಣನ್ನು ಬಳಸಿಕೊಳ್ಳುತ್ತಿರುವ ಬಗೆಗಿನ ವಿರೋಧದ ಮತ್ತೊಂದು ಪ್ರಮುಖ ಕಾರಣ ಈ ಜಾಹಿರಾತು ಸನಾತನವಾದ ಹೆಣ್ಣಿನ ನಿಗದಿತ ಪಾತ್ರ ಮತ್ತು ಹೆಣ್ಣನ್ನು ಕುರಿತ ಅರಚನಾತ್ಮಕ ಧೋರಣೆಯನ್ನು ಸ್ಥಿರೀಕರಿಸುತ್ತದೆ ಎಂಬುದು. ಜನರ ಸಾಂಪ್ರದಾಯಿಕ ದೃಷ್ಟಿಕೋನವನ್ನೂ ಹಾಲಿ ವ್ಯವಸ್ಥೆಯನ್ನೂ ಬೆಂಬಲಿಸುವುದರಿಂದ ಉದ್ಯಮಕ್ಕೆ ಲಾಭವಿದ್ದರೆ, ಜನರ ಜೇಬನ್ನು ಗೆಲ್ಲಲು ಸುಲಭವಾದ ದಾರಿ ಅದಾಗಿದ್ದರೆ ಜಾಹಿರಾತು ಆ ಮಾರ್ಗವನ್ನು ಸಹಜವಾಗಿ ಬಳಸಿಕೊಳ್ಳುತ್ತದೆ. ಬ್ಯಾಂಕಿನ ಉಳಿತಾಯ ಯೋಜನೆಯ ಜಾಹಿರಾತಿನಲ್ಲಿ ನಮಗೆ ಕಾಣುವುದೇನು? ಸಿಂಗರಿಸಿಕೊಂಡ ವಧು–ನೋಡಿದಿರಾ ನೀವಿಂದು ಉಳಿಸಿದರೆ ನಾಳೆ ನಿಮ್ಮ ಮಗಳ ಮದುವೆ ಎಷ್ಟು ಸುಲಭ! ಇಕೋ ವಧುವೊಬ್ಬಳು ಅಲಂಕೃತಳಾಗಿ ಇತ್ತ ಬರುತ್ತಿದ್ದಾಳೆ. ಆಕೆಯ ತಂದೆಯ ಸಾವಿನ ನಂತರವೂ ಇದು ಹೇಗೆ ಸಾಧ್ಯವಾಯಿತು ಎಂದು ನಿಮಗೆ ಆಶ್ಚರ್ಯವೇ? ಆಶ್ಚರ್ಯಕ್ಕೆ ಕಾರಣವಿಲ್ಲ ಈ ಎಕ್ಸ್ ಉಳಿತಾಯ ಯೋಜನೆ ಹೀಗೆ ನಿಮಗೆ ಸಹಾಯ ಮಾಡುತ್ತದೆ. ಅಡಿಗೆ ಮನೆಯ ಅಥವಾ ಮನೆಯ ಯಾವ ವಸ್ತುವಿನ ಜಾಹಿರಾತೇ ಇರಲಿ ಧುತ್ತೆಂದು ಅಲ್ಲೊಬ್ಬಳು ಹೆಂಗಸು ಬರಬೇಕು. ಸೋಪೋ ಹಲ್ಲುಪುಡಿಯೋ

ಔಷಧವೋ ಮಕ್ಕಳ ಜೊತೆಯಲ್ಲಿ ಕಾಣಿಸಿಕೊಳ್ಳುವವಳು ಹೆಚ್ಚಾಗಿ ತಾಯಿ. ಸೋಪು ಪುಡಿಗಳ ಜಾಹೀರಾತೆಂದಿರಾ, ಇಕೋ ನೋಡಿ ಬಟ್ಟೆ ಒಗೆಯುತ್ತಿರುವ, ಒಣಗಿಸುತ್ತಿರುವ ಗೃಹಿಣಿಯರು, ಪ್ರೆಷರ್ ಕುಕ್ಕರ್, ಮಿಕ್ಸರ್ ಮೊದಲಾದವುಗಳ ಹಿಂದೆ ನಗುನಗುತ್ತಿರುವ ಗರತಿಯರು —ಈ ಪಟ್ಟಿ ಕೊನೆಯಿಲ್ಲದೆ ಬೆಳೆಯುತ್ತದೆ. ಮನೆಯ ಒಳಗಲ್ಲ, ಹೊರಗೂ ಇವೆ. ಹಳೆಯ ಮಾದರಿಗಳ ಪುನರುಕ್ತಿಗಳು, ಕಾರ್ಯದರ್ಶಿಗಳು ಅಥವಾ ಓದು, ಬರೆಹದಲ್ಲಿ ತೊಡಗಿದ ಗಂಡಸರ ಹಿಂದೆ ನಿಂತ ಗೊಂಬೆಗಳು ಅಥವಾ ಕರಾಟೆವೀರನ ಜೊತೆಯಲ್ಲಿ ಭರತನಾಟ್ಯದ ಭಂಗಿಯ ಹೆಂಗಸು ಡಿಟರ್ಜೆಂಟ್‌ನ ಪ್ರಚಾರ ಮಾಡುತ್ತಾಳೆ. 'ಸಾಹಸವೇ ನಿಮ್ಮ ಹವ್ಯಾಸ, ಬೀಸುಗಾಳಿಯಲ್ಲಿ ಲಾಸ್ಯ ಮಾಡುವ ಮುಂಗುರುಳು. ಅಂತರಾಳದ ಸಿಂಹಗರ್ಜನೆಯಲ್ಲಿರುವ ಉನ್ಮಾದ, ಗುರಿಯತ್ತ ಸಾಗುವ ತೀವ್ರಗತಿ'– ಇದು ಜಾಹಿರಾತಿನ ಗಂಡಸಿನ ಸರಾಸರಿ ಸೂತ್ರವಾದರೆ 'ನನ್ನ ಕುಟುಂಬದ ಸುಖ, ಸಂತೋಷ ನನ್ನ ಹೊಣೆ, ಆಫೀಸಿನಲ್ಲಿ ಕಷ್ಟಪಟ್ಟು ದುಡಿಯುತ್ತಾರೆ ನನ್ನ ಯಜಮಾನರು, ಶಾಲೆಯಲ್ಲಿ ಕಲಿಯುತ್ತಿದ್ದಾಳೆ ನನ್ನ ಮಗಳು, ಕಾಲೇಜಿನಲ್ಲಿದ್ದಾನೆ ನನ್ನ ಮಗ. ಮನೆಗೆಲಸ ಹಾಗೂ ಪೇಟೆಗೆ ಹೋಗಿ ಬರುವುದರಲ್ಲಿ ಬಿಡುವಿಲ್ಲ ನನಗೆ' ಎನ್ನುವ ಒಂದು ಪೇಯದ ಗೃಹಿಣಿ ಜಾಹಿರಾತು ಪ್ರಪಂಚದ ಸರಾಸರಿ ಹೆಂಗಸು. ಈ ಪರಂಪರಾಗತ ಪಾತ್ರಗಳಿಗೇ ಮಹಿಳೆಯನ್ನು ಕಟ್ಟುವ ಜಾಹಿರಾತು ಈ ಪಾತ್ರಗಳು ಬದಲಾಗುತ್ತಿವೆ, ಬದಲಾಗಬೇಕು ಎಂಬ ಧೋರಣೆಯ ವಿರುದ್ಧ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ ಎನ್ನುವುದು ಇಂಥ ಜಾಹಿರಾತುಗಳ ವಿರೋಧದ ಹಿಂದಿನ ಆಕ್ಷೇಪ, ತುಡಿತ.

ಉದ್ಯಮಿ, ಮಾದರಿ, ಗ್ರಾಹಕ—ಈ ತ್ರಿಬಿಂದುಗಳು ನಿರ್ಮಿಸಿರುವ ಈ ಜಾಹಿರಾತಿನ ಜಗತ್ತು ಬದಲಾಗುತ್ತದೆಯೇ ? ಬದಲಾಗುವುದು ಹೇಗೆ ಎಂಬುದು ನಂತರದ ಪ್ರಶ್ನೆ. ಸಮಾಜದ ಆರೋಗ್ಯವನ್ನು ಬಲಿಕೊಟ್ಟು, ಅಗ್ಗದ ಅಭಿರುಚಿಗಳಿಗೆ ಕುಮ್ಮಕ್ಕು ಕೊಡುವಂತೆ ಹೆಣ್ಣನ್ನು ಹೀನಾಯವಾಗಿಸುವ ಜಾಹಿರಾತುಗಳನ್ನು ಕೊಡಬೇಡಿ, ಸಮಾಜದ ವೈಚಾರಿಕ ಜಾಗೃತಿಗೆ, ಪ್ರಗತಿಗೆ ಪೂರಕವಾಗಿ ಜಾಹಿರಾತುಗಳನ್ನು ಬಳಸಿ ಎಂದು ಉದ್ಯಮಿಗಳನ್ನು ಕೋರಬಹುದು, ಒತ್ತಾಯಿಸಬಹುದು. ಆದರೆ ಅದೊಂದು ಅರಣ್ಯರೋಧನವಾದೀತೆಂಬುದರಲ್ಲಿ ಸಂಶಯವಿಲ್ಲ. ಇನ್ನು ಗ್ರಾಹಕ ಜಗತ್ತು ಹಾಲಿ ಜಾಹಿರಾತಿನ ರುಚಿಯನ್ನು ತಿರಸ್ಕರಿಸಲು ಸಾಧ್ಯವಾಗುವುದು ಒಂದು ಸಾಂಸ್ಕೃತಿಕ ಉತ್ಥಾನ, ವೈಚಾರಿಕ ಆಂದೋಲನದ ನಂತರವೇ. ಆದರೆ ಅದು ಹತ್ತಿರದಲ್ಲಿಲ್ಲದ ಸಂಗತಿ. ಇನ್ನು ಮಾದರಿಗಳಾಗಿ ದುಡಿಯುವ ಹೆಂಗಸರು ಜಾಹೀರುಗೊಳ್ಳುವ ಆಸೆಯಿಂದ ಅಥವಾ ಆರ್ಥಿಕ ಒತ್ತಡದಿಂದ ಮಾದರಿಗಳಾಗಿ ಬಂದಿರಬಹುದು. 'ಜಾಹಿರಾತಿನ ಮಾಡೆಲ್‌ಗಳು ನಾವು ಭಾವಿಸಿದ ಹಾಗೆ ತೀರ ಬಡತನದ ಸ್ಥಿತಿಯಲ್ಲಿರುವುದಿಲ್ಲ' ಎಂಬ ಮಾತು ಕೆಲವರ ಬಗ್ಗೆ ನಿಜವಿದ್ದೀತು, ಆದರೆ ಅದನ್ನು ಸಾಧರಣೀಕರಿಸಲಾಗಲೀ ಅವರೆಲ್ಲರ ಬಗ್ಗೆ ಸಾರಾಸಗಟಾಗಿ ಅನುಮಾನ ತಳೆಯುವುದಾಗಲೀ ನನಗೆ ಧೈರ್ಯವಿಲ್ಲ. ತೀರ ಬಡತನವೋ ಸ್ವಲ್ಪ ಸಿರಿತನವೋ ಆರ್ಥಿಕವಾದ ಆಮಿಷ ಒತ್ತಡವೊ ಈ ಜಾಹಿರಾತಿನ ಮಾಡೆಲ್‌ಗಳ ಹಿಂದಿರುವುದನ್ನು ತಳ್ಳಿಹಾಕಲಾಗುವುದಿಲ್ಲವೆನಿಸುತ್ತದೆ.

ಒಳ ಹೊರ ಪ್ರಪಂಚದ ಬದುಕನ್ನು ತರತಮವಿಲ್ಲದೆ ಸ್ತ್ರೀ–ಪುರುಷರು ಹಂಚಿಕೊಳ್ಳುವುದನ್ನೂ ಮನುಷ್ಯ ಘನತೆಯೊಂದಿಗೆ ವಿಕಸಿತಳಾದ ಹೆಣ್ಣನ್ನೂ ನಮ್ಮ ಜಾಹಿರಾತುಗಳು ಕಾಣಿಸುವ ದಿನಗಳ ಕನಸನ್ನು ಕಾಣುವ ಕಣ್ಣುಗಳಿಗೆ ಈಗಿನ ಜಾಹಿರಾತು ಪ್ರಪಂಚದಲ್ಲಿ ಹೆಚ್ಚು ಬಳಕೆಯಾಗುತ್ತಿರುವ ರೀತಿಯ ಬಗ್ಗೆ ಅರುಚಿಯಿರುವುದು ವಸ್ತುಸ್ಥಿತಿ. ಆದರೆ ಈ ಉತ್ಥಾನ ಇಡಿ ಸಂಸ್ಕೃತಿಯ, ಮಹಿಳೆಯ ಉತ್ಥಾನವನ್ನವಲಂಬಿಸಿದೆ. ಜಾಹಿರಾತಿನ ಹಿಂದಿರುವ ವಸ್ತುಸ್ಥಿತಿಗೆ ಮನಸ್ಸನ್ನು ವಿಮುಖವಾಗಿಸದೆ ಹೆಣ್ಣನ್ನು ಉಚಿತ ಘನತೆಯಿಂದ ಜಾಹಿರಾತುಗಳು ಬಳಸಿಕೊಳ್ಳುವುದು ಈ ಸಾಂಸ್ಕೃತಿಕ ಉತ್ಥಾನಕ್ಕೆ ಅಗತ್ಯವಲ್ಲವೆ ? ○

'ಆಕಾಶವಾಣಿ ಕೃಪೆ'

ಸ್ತ್ರೀ ಸಂವೇದನೆಯ ವಿವಿಧ ಧ್ವನಿಗಳು

ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಮತ್ತು ಮಹಿಳಾ ಸಾಹಿತ್ಯವನ್ನು ಕುರಿತ ವಿವಿಧ ಧ್ವನಿಗಳು ಇತ್ತೀಚೆಗೆ ನಡೆದ ವಿಚಾರ ಸಂಕಿರಣವೊಂದರಲ್ಲಿ ಕೇಳಿಬಂದವು. ಸಂದರ್ಭ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ ಹಾಗೂ ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆಯವರು ಕೂಡಿ ಏರ್ಪಡಿಸಿದ್ದ ಸಾಹಿತ್ಯಕ ಸಮಾರಂಭದಲ್ಲಿ. ಅಂದು ಡಾ॥ ವಿಜಯಾ ದಬ್ಬೆಯವರ 'ಮಹಿಳೆ, ಸಾಹಿತ್ಯ, ಸಮಾಜ' ಪ್ರಬಂಧ ಸಂಕಲನ ಬಿಡುಗಡೆಯಾಯಿತು. ಬಿಡುಗಡೆ ಮಾಡಿದ ಡಾ॥ ಡಿ. ಆರ್. ನಾಗರಾಜ್ ಮತ್ತು ಸೀಮಂತಿನಿ ನಿರಂಜನರವರು ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯನ್ನು ಕುರಿತಂತೆ ಮತ್ತು ಸ್ತ್ರೀವಾದಿ ವಿಮರ್ಶೆಯನ್ನು ಕುರಿತಾದ ಕೆಲವು ಮೂಲಭೂತ ಪ್ರಶ್ನೆಗಳನ್ನು ಚರ್ಚಿಸಿದರು.

ಬರವಣಿಗೆಯ ಕ್ರಮದಲ್ಲಿ ಇರುವ ಎರಡು ವಿಧಗಳನ್ನು ಪ್ರಸ್ತಾಪಿಸುತ್ತಾ, ಒಂದು, ಕೋಪದಿಂದ ಕೂಡಿದ, ವ್ಯಂಗ್ಯದ ಪ್ರತಿಭಟನೆಯ ಶೈಲಿಯ ಬರವಣಿಗೆಯಾದರೆ, ಮತ್ತೊಂದು ತನ್ಮಯತೆಯಿಂದ ಕೂಡಿದ, ವಿಮೋಚನಾ ಪರವಶತೆಯನ್ನು, ಪ್ರತಿಭಾ ವಿಲಾಸವನ್ನು ಪಡೆದದ್ದೆಂದೂ ನಿರೂಪಿಸಿದ ಡಿ. ಆರ್. ಎನ್ ರವರು ವಿಜಯಾರವರ ಬರವಣಿಗೆಯನ್ನು ಪ್ರತಿಭಟನೆಯ ಶೈಲಿಗೆ ಸಮೀಕರಿಸಿದರು. ವಿಜಯಾರವರು ತಮ್ಮ ಕೃತಿಯಲ್ಲಿನ ಲೇಖನಗಳಲ್ಲಿ ಕನ್ನಡ ಸಾಂಸ್ಕೃತಿಕ ಜಗತ್ತಿನಲ್ಲಿ ಮುಖಾಮುಖಿಯಾಗಿದ್ದರೂ ಒಂದು ರೀತಿಯ ತಾತ್ವಿಕ ಸ್ಪಷ್ಟತೆಯನ್ನು ಪಡೆದುಕೊಂಡಿಲ್ಲ. ಕಡೆಗೆ ಕನ್ನಡ ಸಂಸ್ಕೃತಿ ಏನನ್ನು ಬಿಟ್ಟಿದೆ? ಎನ್ನುವುದಕ್ಕೂ ವಿಜಯಾ ಹೆಚ್ಚು ಗಮನ ಕೊಡಬೇಕು ಎಂದು ಅಭಿಪ್ರಾಯಪಟ್ಟರು.

ಪುಸ್ತಕ ಬಿಡುಗಡೆಯ ಜೊತೆಗೆ ಸ್ತ್ರೀ ಸಾಹಿತ್ಯದ ಹಾಗೂ ವಿಮರ್ಶೆಯ ಹಲವಾರು ಅಂಶಗಳನ್ನು ಪ್ರಸ್ತುತ ಪಡಿಸಿದ ಡಿ. ಆರ್. ಎನ್ ರವರು ಸ್ತ್ರೀ ಕೇಂದ್ರಿತ ಅಧ್ಯಯನಗಳ ನೆಲೆಗಳನ್ನು ಪ್ರಸ್ತಾಪಿಸಿದರು. ಹೆಣ್ಣು ದಮನಕ್ಕೆ ಒಳಗಾದವಳು ಎನ್ನುವ (victim model) ನೆಲೆಯ ಮೇಲೆ ರೂಪಿತವಾದ ಸಿದ್ಧಾಂತವೊಂದೆಡೆಯಾದರೆ ಅವಳನ್ನು ಪ್ರತಿಭಟನೆಯ, ಸ್ಥೈರ್ಯದ, ನಿರ್ದಿಷ್ಟ ವ್ಯಕ್ತಿತ್ವದ ಮಾದರಿಯಾಗಿ (Roll model) ಕಾಣುವ ಸಿದ್ಧಾಂತದ ನೆಲೆಯಲ್ಲಿ ಅಧ್ಯಯನವನ್ನು ಗುರುತಿಸಲಾಯಿತು. 'ಹುಚ್ಚು' ಸಾಹಿತ್ಯ ಕೃತಿಗಳಲ್ಲಿ ಹೇಗೆ ಪ್ರತಿಮೆಯಾಗಿ ಬರುತ್ತದೆ ಎನ್ನುವುದಕ್ಕೆ ತ್ರಿವೇಣಿ ಮತ್ತು ಕಾರಂತರ ಕೃತಿಗಳನ್ನು ಉದಾಹರಿಸಿದರು. ಅದು ಜಾಗತಿಕ ಸಾಹಿತ್ಯದಲ್ಲಿ ಕಂಡುಬರುವ ವಿದ್ಯಮಾನವೂ ಹೌದು ರೊಚ್ಚಿನಿಂದ ಬರೆಯುವ ಲೇಖಕಿ ಇಡೀ ಜಗತ್ತನ್ನು ಹುಚ್ಚುತನದಿಂದ ವೀಕ್ಷಿಸುವ ರೀತಿಯದು. ಕಾರಂತರಲ್ಲಿ ರಚನೆ ಮುಖ್ಯವಾದರೆ, ತ್ರಿವೇಣಿಯವರಲ್ಲಿ ಸಂವೇದನೆ ಹೇಗೆ ಮುಖ್ಯವಾಗುತ್ತದೆ ಎಂಬುದನ್ನು ಕುರಿತು ವಿವರಿಸಿದರು.

ಕಡೆಗೆ ಸ್ತ್ರೀ ಸಂವೇದನೆಯ ಬಗ್ಗೆ ಪ್ರಸ್ತಾಪಿಸುತ್ತಾ, ಸ್ತ್ರೀ ಸಂವೇದನೆಯೆನ್ನುವುದು ಪುರುಷರ ಕೃತಿಗಳಲ್ಲೂ ಕಾಣಬಹುದು. ಇದು 'ಲಿಂಗಾತೀತವಾದ ಸ್ಥಿತಿಯೆಂದು ಅರ್ಧನಾರೀಶ್ವರ ಸಂವೇದನೆಯ ಮೂಲಕ ವಿವರಿಸಿದರು. ಗಂಡು ತನ್ನ ಅಹಂಕಾರ ನಷ್ಟ ಮಾಡಿಕೊಳ್ಳಲು ಸಾಧ್ಯವಾದಾಗ ಸೃಷ್ಟಿಯಾಗುವ ಸಾಹಿತ್ಯ ಕ್ರಿಯೆಯಲ್ಲಿ ಇದನ್ನು ಗುರುತಿಸಬಹುದು. ಕನ್ನಡ ಸಾಹಿತ್ಯದಲ್ಲೇ ಸ್ತ್ರೀ ಸಂವೇದನೆಯ ದಟ್ಟ ಗುಣವನ್ನು ಹೆಚ್ಚು ಪ್ರತಿನಿಧಿಸುವ ಕಲಾಕೃತಿಗಳು ಪು. ತಿ. ನ. ಅವರಲ್ಲಿ ಕಾಣಬಹುದು.

ಕಡೆಯದಾಗಿ ಪಾಶ್ಚಿಮಾತ್ಯ ಸ್ತ್ರೀ ಬರಹಗಾರರಿಗೂ ಮತ್ತು ಭಾರತೀಯ ಸ್ತ್ರೀ ಬರಹಗಾರರಿಗೂ ಇರುವ ವ್ಯತ್ಯಾಸವನ್ನು ಗುರುತಿಸುತ್ತಾ ಡಿ. ಆರ್. ಎನ್. ರವರು ಎರಡು ಬಗೆಯ ಅಂಶವನ್ನು ಗಮನಿಸುತ್ತಾರೆ: ಪಾಶ್ಚಿಮಾತ್ಯ ಸ್ತ್ರೀ ಬರಹಗಾರ್ತಿ ತನ್ನ ಕೃತಿಗಳಲ್ಲಿ ವಿರೋಧಾತ್ಮಕ ನೆಲೆಗಳಲ್ಲಿ ಚರ್ಚಿಸುವಾಗ ಪದಾರ್ಥ ಜಗತ್ತಿನ ವಿವರಗಳನ್ನು ಕೊಡುತ್ತಾ, ಆ ಜಗತ್ತನ್ನು ವಿರೋಧಿಸುತ್ತಾ ಕಾದಂಬರಿಯ ಜಗತ್ತನ್ನು ಸೃಷ್ಟಿಸುತ್ತಾಳೆ. ಆದರೆ ಭಾರತೀಯ ಲೇಖಕಿ ಅಂತಿಮವಾಗಿ

ಮಾನಸಿಕ ಸ್ಥಿತಿಯನ್ನು ಪುನರ್‌ರಚಿಸುವ ಕ್ರಿಯೆಯಲ್ಲಿ ತೊಡಗುತ್ತಾಳೆ. ಇದನ್ನು ಪುರುಷ ಲೇಖಕರಿಗೂ ಅನ್ವಯಿಸಬಹುದು. ಇದು ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣವೂ ಹೌದು.

ವಿವಿಧ ಧ್ವನಿಗಳು

ಸ್ತ್ರೀ ಸಂವೇದನೆಯನ್ನು ಕುರಿತ ಚರ್ಚೆಯನ್ನು ಆರಂಭಿಸುತ್ತಾ, ಸೀಮಂತಿನಿ ನಿರಂಜನರವರು, ಸಾಹಿತ್ಯ ವಿಮರ್ಶೆ ಜಾಗತಿಕವಾದುದಲ್ಲ, ಎಂಬುದನ್ನು ಸ್ಪಷ್ಟ ಪಡಿಸುತ್ತಾ ಚರ್ಚೆಗೆ ಆರಂಭಿಸಿದರು. ಸಾಹಿತ್ಯ ಸಿದ್ಧಾಂತದಲ್ಲಿ ನಡೆಯುತ್ತಿರುವ ಕ್ರಾಂತಿಕಾರಿ ಬದಲಾವಣೆಗಳು ಸಾಹಿತ್ಯ ಸಿದ್ಧಾಂತವನ್ನೇ ಬದಲು ಮಾಡುತ್ತಿವೆ. ಈ ಸಂದರ್ಭದಲ್ಲಿ ಉಂಟಾಗಿರುವ ಅಸ್ಪಷ್ಟತೆ, ಗೊಂದಲದಿಂದಾಗಿ ಸಾಹಿತ್ಯದ ಕೆಲವು ಮುಖ್ಯ ಧ್ವನಿಗಳನ್ನು ಗುರುತಿಸಬಹುದು. ಕೃತಿಯೊಂದರ ವಿಮರ್ಶೆಯೆಂದರೆ, ಕೃತಿಕಾರನ ಸಾಂಸ್ಕೃತಿಕ ಸನ್ನಿವೇಶ, ಒಲವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ವಿಮರ್ಶೆಯನ್ನು ಕೇಂದ್ರೀಕರಿಸಬೇಕು. ಮಹಿಳಾ ಸಾಹಿತ್ಯದ ಭಿನ್ನತೆಯನ್ನು ಒಪ್ಪಿಕೊಂಡ ಸೀಮಂತಿನಿ, ವಿಮರ್ಶಕಿ ಕ್ರಿಶ್ಚಿಯನ್ ರೋಶ್ಶೆ ಹೇಳುವಂತೆ, ಹೆಣ್ಣಿನ ಸಾಹಿತ್ಯದ ಭಿನ್ನತೆ ದೈಹಿಕ ಕಾರಣಕ್ಕಾಗಿ ಅಲ್ಲ, ಆದರೆ ಪಸಾಹತುಶಾಹಿ ರೂಪಿಸಿದ ಮನಸ್ಸಿನಿಂದ ರೂಪಿತವಾದದ್ದು, ಎನ್ನುತ್ತಾರೆ. ಈ ದೃಷ್ಟಿಯಿಂದಲೇ ಸ್ತ್ರೀ ಸಾಹಿತ್ಯವನ್ನು ವಸಾಹತುಶಾಹಿ ಸಾಹಿತ್ಯವೆಂದೂ ಕರೆಯುತ್ತಾರೆ. ಸ್ತ್ರೀ ಸಂವೇದನೆಯ ಗುಣವನ್ನು ಚರ್ಚಿಸುವಾಗ ಅದನ್ನು ಮೂರು ನೆಲೆಯಲ್ಲಿ ಅಭ್ಯಸಿಸುವುದು ಹೆಚ್ಚು ಸೂಕ್ತ. ಸಾಹಿತಿಯಾಗಿ ಹೆಂಗಸಿನ ಅಧ್ಯಯನ, ಮಹಿಳಾ ಸಾಹಿತಿಯ ಅಧ್ಯಯನ ಮತ್ತು ಸ್ತ್ರೀ ಓದುಗರ ಅಧ್ಯಯನ. ಸ್ತ್ರೀ ಸಂವೇದನೆಯ ಬುನಾದಿಯಿರುವುದು ಸ್ತ್ರೀ ವ್ಯಕ್ತಪಡಿಸುವ ಹೆಣ್ಣುತನದಲ್ಲಿ. ಈ 'ಹೆಣ್ಣುತನ'ದ ವ್ಯಾಖ್ಯಾನವಷ್ಟೇ ನಾವು ಏನನ್ನು ಹೇಳುತ್ತೇವೆ ಎನ್ನುವುದರ ಸೂಚಿ. ಹೆಣ್ಣಿನ, ಅವಳ ಸಮಾಜದ ಅನುಭವಗಳನ್ನು ಒಪ್ಪಿಕೊಳ್ಳಬಹುದು. ಆದರೆ ಬಹಳಷ್ಟು ಬಾರಿ ಹೆಣ್ಣಿನ ಗುಣಗಳು ಆರೋಪಿತವಾದವು; ನಿರ್ದಿಷ್ಟ ಸಾಂಸ್ಕೃತಿಕ ಸನ್ನಿವೇಶದಿಂದ ರೂಪಿತವಾದವು. ಆದ್ದರಿಂದಲೇ ಸ್ತ್ರೀ ಮಾದರಿಗಳ ಪ್ರಸ್ತಾಪ ಬಂದರೆ ಸಮಾಜದ ಆರೋಪಿತ ಮಾದರಿಗಳನ್ನು ನಿರಾಕರಿಸಿ ಪರ್ಯಾಯಗಳನ್ನು ರೂಪಿಸಿಕೊಳ್ಳುತ್ತಿರುತ್ತೇವೆ.

ಸಾಹಿತ್ಯಕ ಅಲ್ಲ

'ಸ್ತ್ರೀ ಸಂವೇದನೆ'ಯನ್ನು ಕುರಿತಂತೆ ಚರ್ಚಿಸುವುದು ಕೇವಲ ಸಾಹಿತ್ಯಿಕ ಆಗುವುದಿಲ್ಲ. ಅದು ಅನಿವಾರ್ಯವಾಗಿ ರಾಜಕೀಯವಾದದ್ದು, ಸಾಂಸ್ಕೃತಿಕವಾದದ್ದೂ, ಸಾಮಾಜಿಕವಾದದ್ದೂ, ಆಗಬೇಕಾಗುತ್ತದೆ. ಸ್ತ್ರೀ ಸಂವೇದನೆ ಸ್ತ್ರೀ ವಿಶಿಷ್ಟವಾದದ್ದು. ಇದು ಇದಮಿತ್ಥಂ ಎಂದು ನಿರ್ದಿಷ್ಟವಾದುದಲ್ಲ; ಚಲನಶೀಲವಾದದ್ದು. ಸಾಂಸ್ಕೃತಿಕವಾಗಿ ನಿರ್ದಿಷ್ಟತೆ ಮುಖ್ಯ. ಈ ವಿಷಯವನ್ನು ಕುರಿತು ಚರ್ಚಿಸುವಾಗ, ಇನ್ನು, ಕೆಲವೊಂದು ಶಬ್ಧಗಳನ್ನು, ಪರಿಕಲ್ಪನೆಗಳನ್ನು ಕುರಿತು ಚರ್ಚಿಸಬಹುದು. ಸ್ತ್ರೀತ್ವ, ಇದಕ್ಕೆ ಕಾಲದೇಶಗಳ ಚೌಕಟ್ಟು ಹಾಕಬೇಕಿಲ್ಲ. ಆದರೆ ಸಾಂಸ್ಕೃತಿಕವಾಗಿ ನಿರ್ದಿಷ್ಟತೆ ಮುಖ್ಯ.

ಇಂದು ಲೋಕಗ್ರಹಿಕೆಯಲ್ಲಿ ಹಾಗೂ ಭಾಷಿಕ ಅಭಿವ್ಯಕ್ತಿಯಲ್ಲಿರುವ ಗಂಡುತನವನ್ನು ನಿರಾಕರಿಸಿ ಅದಕ್ಕೆ ಎದುರಾಗಿ ಇನ್ನೊಂದು ಸಾಧ್ಯತೆಯನ್ನು ಗುರಿಯಾಗಿರಿಸಿಕೊಳ್ಳುತ್ತದೆ. ಇದು 'ಗಂಡುತನ'ಕ್ಕೆ ಪೂರಕವಾದುದಲ್ಲ; ಪ್ರತಿಯಾದುದು: ಈ ವ್ಯಾಖ್ಯೆಯನ್ನು ಬಲು ಎಚ್ಚರದಿಂದ ಗಮನಿಸಬೇಕು. ಏಕೆಂದರೆ ಇದರ ಅನ್ವಯದಲ್ಲಿ ಕಿಂಚಿತ್ತು ಎಡವಿದರೂ ನಿರೀಕ್ಷಿಸದ ಅಪಾಯಗಳಿಗೆ ಬಲಿಯಾಗುವ ಸಾಧ್ಯತೆ ಸಂಭವವಿದೆ. ಪ್ರತಿಭಟಿಸುತ್ತಿರುವ ಹೆಣ್ಣಿನ ಚಹರೆಗಳನ್ನು ರೂಪಿಸುತ್ತಿರುವವರು ಗಂಡಸರು. ಆದ್ದರಿಂದಲೇ ಇದನ್ನು ಗಂಡಸಿನ ಮೂಲಕ ಮೈದಳೆದ 'ಹೆಣ್ಣುತನ' ಎಂದು ಕರೆಯುತ್ತೇವೆ. ಇಂದು ಮಹಿಳಾ ಸಾಹಿತ್ಯ ಪುರುಷ ಸಂವೇದನೆಯ ಭಾಷೆ, ಸಾಹಿತ್ಯ ಪ್ರಭಾವದಿಂದ ಹೊರತಾಗಿಲ್ಲ. ಈ ಸ್ತ್ರೀ ಸಂವೇದನೆಯನ್ನು ಎರಡು ಮುಸುಕಾದ ರೂಪದಲ್ಲಿ ಕಾಣಬಹುದಾಗಿದೆ. ಒಂದು, ವರ್ತಮಾನಕ್ಕೆ ಕಟ್ಟು ಬೀಳುವ ಸಾಂಪ್ರದಾಯಿಕ ಶೈಲಿಯೊಂದೆಡೆಯಾದರೆ, ಗಂಡಸುದತ್ತ ಮಾದರಿಗಳಿಂದ ಕೂಡಿದ ಬಿಡುಗಡೆಯ ಮಾದರಿ. ಆದರೆ ಇದನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವುದು ಆರೋಗ್ಯಕರವಲ್ಲ. ನಮ್ಮ ಸುತ್ತ ಮುತ್ತ ಇರುವ ಬಹುಪಾಲು ಸಾಹಿತ್ಯ ಇಂಥದೇ. ಇದು ಸ್ತ್ರೀಯ ದೇಹ ಮತ್ತು ಮನಸ್ಸನ್ನು ಸಂಪೂರ್ಣವಾಗಿ ವಿಘಟನೆ ಮಾಡುತ್ತಾ ಹೋಗಿದೆ.

ಒಟ್ಟಿನಲ್ಲಿ ಮಹಿಳೆ, ಸಾಹಿತ್ಯ, ಸ್ತ್ರೀ ಸಂವೇದನೆಯನ್ನು ಕುರಿತಂತೆ ನಡೆದ ಈ ಸಂವಾದ ಯಾವುದೇ ನಿರ್ದಿಷ್ಟ ತೀರ್ಮಾನ, ಪರಿಹಾರಗಳತ್ತ ಕೇಂದ್ರೀಕೃತವಾಗಿರದಿದ್ದರೂ ಈ ಸಾಹಿತ್ಯಕ ಪ್ರಶ್ನೆಯ ಹಲವಾರು ಮಗ್ಗಲುಗಳನ್ನು ಪರಿಚಯಿಸುವತ್ತ ಹಲವಾರು ಧ್ವನಿಗಳನ್ನು ಗುರುತಿಸುವತ್ತ ಪ್ರಾಮಾಣಿಕ ಪ್ರಯತ್ನ ನಡೆಸಿತು. ಇದುವರೆಗೆ ಮಹಿಳಾ ಸಾಹಿತ್ಯವೆಂದೊಡನೆ ಮಹಿಳಾ ಸಾಹಿತ್ಯಕ್ಕೆ ಸಲ್ಲಬೇಕಾದ ಗೌರವ, ಮನ್ನಣೆಗಳ ಬಗೆಗಷ್ಟೇ ನಡೆಯುತ್ತಿದ್ದ ಚರ್ಚೆ, ಸ್ತ್ರೀ ಮತ್ತು ಸಾಹಿತ್ಯ ವಿಮರ್ಶೆಯ ಇನ್ನೊಂದು ದಿಕ್ಕಿನಲ್ಲೂ ಚರ್ಚೆಯನ್ನು ಆರಂಭಿಸಿರುವುದು ಗಮನಾರ್ಹವಾದದ್ದು. ○

—ಆಶಾ

ಎಂಥ ಅಭಿವೃದ್ಧಿ ?

ಭಾರತದಲ್ಲಿ ಅಭಿವೃದ್ಧಿಯೆನ್ನುವುದು ಕೇವಲ ಆರ್ಥಿಕ ಕ್ಷೇತ್ರಕ್ಕಷ್ಟೇ ಮೀಸಲಾಗಿರುವಂತೆ ಕಾಣುತ್ತದೆ. ಅಭಿವೃದ್ಧಿ ಯೋಜನೆಗಳಿಗೆ ಗಮನ ಕೊಡುವಾಗ ಸರ್ಕಾರ ಆ ಯೋಜನೆಗಳು ಒಳಗೊಳ್ಳಬೇಕಾದ ಸಾಮಾಜಿಕ ಅಂತರ್ ರಚನೆಯಲ್ಲಿನ ಬದಲಾವಣೆ ಮತ್ತು ಸಾಮಾಜಿಕ ನ್ಯಾಯಕ್ಕೆ ಕುರುಡಾಗುವುದು ಸರ್ವತ್ರ ಕಂಡುಬರುತ್ತಿರುವ ಸಂಗತಿ. ಆರ್ಥಿಕ ಬೆಳವಣಿಗೆ ಏಕಮುಖವಾದಾಗ ಅದು ಬೀರುವ ನೇತ್ಯಾತ್ಮಕ ಪರಿಣಾಮಕ್ಕೆ ಇಲ್ಲೊಂದು ಉದಾಹರಣೆ, ಹಿಮಾಚಲ ಪ್ರದೇಶದ ಹಳ್ಳಿಯಲ್ಲಿದೆ.

ಧರ್ಮಾಪುರ, ಸೋಲಾನ್ ಜಿಲ್ಲೆಯಲ್ಲಿರುವ ಹಿಮಾಚಲ ಪ್ರದೇಶದ ಒಂದು ಹೋಬಳಿ. ಇಲ್ಲಿ ಕುಡಿತದ ವಿರುದ್ಧ ಅಲ್ಲಿನ ಮಹಿಳೆಯರು ನಡೆಸಿದ ಸಂಘಟಿತ ಹೋರಾಟ ಉಲ್ಲೇಖಾರ್ಹ. 1986ರ ಮಾರ್ಚ್‌ನಲ್ಲಿ ಸುಮಾರು 500 ಮಂದಿ ಮಹಿಳೆಯರು ಡೆಪ್ಯುಟಿ ಕಮಿಷನರ್‌ರವರ ಕಛೇರಿಯ ಮುಂದೆ ಧರಣಿಕೂತರು. ಆ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಸಾರಾಯಿ ಅಂಗಡಿ ಹಾಗೂ ಅವುಗಳಿಗೆ ಲೈಸೆನ್ಸ್ ನೀಡುವ ಸರ್ಕಾರದ ನೀತಿಯನ್ನು ವಿರೋಧಿಸಲು ಮತ್ತು ಪ್ರತಿಭಟಿಸುವ ಸಲುವಾಗಿ.

ಅಭಿವೃದ್ಧಿಯ ಫಲ

ಅರವತ್ತರ ಹಾಗೂ ಎಪ್ಪತ್ತರ ದಶಕದಲ್ಲಿ ಸರ್ಕಾರ ಕೈಗೊಂಡ ಬಹುಮುಖ ಅಭಿವೃದ್ಧಿ ಯೋಜನೆಗಳಿಂದಾಗಿ ಬರೋಟಿವಾಲಾ ಹಾಗೂ ಪರ್ವಾನು ನಗರಗಳೆರಡನ್ನೂ ಸರ್ಕಾರ ಔದ್ಯೋಗಿಕ ಕೇಂದ್ರಗಳೆಂದು ಘೋಷಿಸಿತು. ಹೀಗಾಗಿ ಬಹಳಷ್ಟು ಕೃಷಿ ಕಾರ್ಮಿಕರಿಗೆ ಕಾರ್ಖಾನೆಗಳಲ್ಲಿ ಹಾಗೂ ಖಾಸಗಿ ಕಂಪೆನಿಗಳಲ್ಲಿ ಉದ್ಯೋಗಾವಕಾಶ ದೊರೆಯಿತು. ತರಕಾರಿ, ಸಾಂಬಾರು ಪದಾರ್ಥಗಳು, ಹಾಗೂ ಹೆಚ್ಚು ಇಳುವರಿ ಕೊಡುವ ಧಾನ್ಯಗಳ ಬೆಳೆಯುವಿಕೆಯಿಂದ ಜನತೆಯ ಆರ್ಥಿಕ ಸ್ಥಾನಮಾನ ಹೆಚ್ಚಾಯಿತು; ಕೊಳ್ಳುವ ಸಾಮರ್ಥ್ಯ ಇಮ್ಮಡಿಸಿತು.

ಆರ್ಥಿಕ ಸ್ಥಾನಮಾನದ ಹೆಚ್ಚುವರಿಯಿಂದ ಗುಣಾತ್ಮಕ ಬೆಳವಣಿಗೆಯಾಗದೇ ಇಲ್ಲ. ವಿದ್ಯಾವಂತರ ಸಂಖ್ಯೆ ಹೆಚ್ಚಾಯಿತು. ನಾಗರಿಕತೆಯ ಪರಿಚಯವಾದಂತೆ ತಿಳುವಳಿಕೆ ಜಾಸ್ತಿ ಆಯಿತು. ಅದರ ಫಲವಾಗಿ ಬಡವರ ಮತ್ತು ಸಿರಿವಂತರ ನಡುವೆ ಅಂತರ ಜಾಸ್ತಿಯಾಯಿತು. ಸಾಮಾಜಿಕ–ಸಾಂಸ್ಕೃತಿಕ ಬದಲಾವಣೆಗೆ ಹೆಚ್ಚು ಒತ್ತು ಬೀಳದೆ ದಿಢೀರ್ ಎಂದು ಆದ ಆರ್ಥಿಕ ಬದಲಾವಣೆಯಿಂದ ಜನರ ದುಶ್ಚಟಗಳಿಗೆ ಹಣದ ಪೂರೈಕೆ ಸಾಧ್ಯವಾಯಿತು. ಬಹುಮುಖ್ಯವಾಗಿ ಅಧಿಕ ಜನರು ಕುಡಿತದ ಹವ್ಯಾಸಕ್ಕೆ ಬಲಿಯಾದರು.

ಸರಕಾರದ ನೀತಿ

ಬೇರೆ ರಾಜ್ಯಗಳಲ್ಲಿ ಪಾನ ನಿಷೇಧ ಕಾಯಿದೆಯು ವೈಫಲ್ಯಗೊಂಡುದನ್ನು ಕಂಡ ರಾಜ್ಯ ಸರ್ಕಾರ ಇಲ್ಲಿಯೂ ಆ ಕಾನೂನನ್ನು ಸಡಿಲ ಗೊಳಿಸಿತು. ಇದರ ಪರಿಣಾಮವಾಗಿ ಬಟ್ಟಿ ಸಾರಾಯಿಯ ಉತ್ಪನ್ನ ಅಧಿಕವಾಯಿತು. ಅದರ ಬಳಕೆಗೂ ಕೊನೆಯಿಲ್ಲದಾಯಿತು.

ಧರ್ಮಪುರ ಜಿಲ್ಲೆಯ ಒಟ್ಟಾರೆ ಅಭಿವೃದ್ಧಿಯ ಪರಿಣಾಮವಾಗಿ ಜೀವನ ಆದಾಯ ಜಾಸ್ತಿಯಾದರೂ ಅದರ ಫಲ ಜನತೆಗೆ ದಕ್ಕಲಿಲ್ಲ. ತಕ್ಷಣ ಹೆಚ್ಚಿದ ಆರ್ಥಿಕ ಸ್ಥಾನ

ಮಾನದಿಂದ ಮದುವೆ, ಸಮಾರಂಭಗಳಿಗೆ ಹಣ ಸುರಿಯುವುದು ಪೂಜೆ, ಪುನಸ್ಕಾರಗಳೆಂದು ಹಣವನ್ನೆಲ್ಲ ಕಳೆದುಕೊಳ್ಳಲಾರಂಭಿಸಿದರು. ಈ ಎಲ್ಲ ಸಂದರ್ಭಗಳಲ್ಲಿ ಕುಡಿಯುವುದು ಅತಿ ಅಗತ್ಯವೆಂಬ ಸಂಪ್ರದಾಯವನ್ನೂ ರೂಢಿಸಿಕೊಂಡರು.

ಸ್ವಾತಂತ್ರ್ಯಕ್ಕೆ ಧಕ್ಕೆ

ಅತಿ ಕುಡಿತದ ಹಾವಳಿಯಿಂದ ಹೆಣ್ಣು ಮಕ್ಕಳ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿತು. ಮಾರುಕಟ್ಟೆಗೆ ಸಲೀಸಾಗಿ ಓಡಾಡಲಾಗಲೀ, ಕತ್ತಲಾದ ನಂತರ ಬಸ್ ನಿಲ್ದಾಣದಲ್ಲಿ ನಿಲ್ಲಲು, ಬಸ್ಸುಗಳಲ್ಲಿ ಓಡಾಡಲು ಹೆದರಿಕೆ ಈ ಬಸ್‌ಗಳಲ್ಲಿ ಓಡಾಡುವ ಕನಿಷ್ಟ ಶೇಕಡ 50ರಷ್ಟು ಮಂದಿ ಕುಡುಕರಾಗಿರುತ್ತಾರೆ. ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು, ಹೊಲಗಳಿಗೆ ಕೆಲಸಕ್ಕೆ ಕಳುಹಿಸಲು ಹೆದರುತ್ತಿದ್ದರು.

ಕುಟುಂಬಗಳಲ್ಲಿ ಶಾಂತಿ ಕಹಡಿ ನಿತ್ಯ ರಣರಂಗವಾಗುವುದು ಸಾಮಾನ್ಯ ದೃಶ್ಯ. ಹೆಂಡತಿಯನ್ನು ಬಡಿಯುವುದು ಬಹಳಷ್ಟು ಮನೆಗಳಲ್ಲಿ ಅನಾರೋಗ್ಯಕರ ವಾತಾವರಣವನ್ನು ಸೃಷ್ಟಿಸುತ್ತಿತ್ತು. ಇದು ದೇಶದ ಬೇರ್ಯಾವುದೇ ಪ್ರದೇಶಗಳಲ್ಲಿ ಕಂಡುಬರುವ ಸಾಮಾನ್ಯ ದೃಶ್ಯವಾದರೂ, ಈ ಪ್ರದೇಶದ ಸಂಸ್ಕೃತಿಯಲ್ಲಿ ದಿಢೀರ್ ಆಗಿ ಉಂಟಾದ ಬದಲಾವಣೆಯಿದು.

1986ರ ಫೆಬ್ರವರಿ 23ರಂದು ಮಹಿಳಾ ಮಂಡಲವು ನಡೆಸಿದ ಸಭೆಗಳಲ್ಲಿ 100 ಹಳ್ಳಿಗಳಿಂದ 25,000 ಮಹಿಳೆಯರು ಸಭೆಯಲ್ಲಿ ಭಾಗವಹಿಸಿದರು. ಆ ಸಭೆಯಲ್ಲಿ ಬಹಳಷ್ಟು ಮಂದಿ ವಿವಾಹಿತರಾದವರು ಮತ್ತು ವಿವಿಧ ಜಾತಿ, ವರ್ಗಗಳಿಂದ ಬಂದವರಾಗಿದ್ದರು. ಮದ್ಯಪಾನ ನಿಷೇಧದ ವಿರುದ್ಧ ನಿರ್ಣಯಗಳನ್ನು ಮಂಡಿಸಲಾಯಿತು. ಡೆಪ್ಯುಟಿ ಕಮಿಷನರ್‌ಗೆ ಮತ್ತು ಮುಖ್ಯಮಂತ್ರಿಗಳಿಗೆ ಮನವಿಗಳನ್ನು ಸಲ್ಲಿಸಿದರು. ಫೆಬ್ರವರಿ 23ರಿಂದ ನವೆಂಬರ್ 17ರ ವರೆಗೆ ಹಲವಾರು ರೀತಿಯ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಯಿತು. ಹೊಸ ರೀತಿಯ ನಾಯಕತ್ವದ ಉಗಮವಾಯಿತು.

ಸೋಲಾನ್ ಜಿಲ್ಲೆಯಲ್ಲಿ ನಡೆದ ಆರ್ಥಿಕ ಬೆಳವಣಿಗೆಯ ನಂತರದ ಪಾಠವನ್ನು ಹೀಗೆ ಗುರುತಿಸಿಕೊಳ್ಳಬಹುದು. ಯಾವುದೇ ಸಮುದಾಯದ ಸರ್ವತೋಮುಖ ಬೆಳವಣಿಗೆಯು ಆ ಸಮುದಾಯದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡಿರಬೇಕು. ಸಮಾಜದ ಧ್ಯೇಯೋದ್ದೇಶಗಳು ಸರ್ಕಾರದ ಧ್ಯೇಯೋದ್ದೇಶಗಳೊಂದಿಗೆ ಸಮರಸ ಹೊಂದಿಲ್ಲದಿದ್ದರೆ ಸಾಮಾಜಿಕ ಪರಿಸ್ಥಿತಿ ಬಿಗಡಾಯಿಸುತ್ತದೆ. ಅಭಿವೃದ್ಧಿ ಯೋಜನೆಗಳ ರೂಪುರೇಷೆಗಳನ್ನು ನಿರ್ಧರಿಸುವ ಕಾರ್ಯ ಯಂತ್ರದಲ್ಲಿ ಮಹಿಳೆಯರ ಭಾಗವಹಿಸಿಕೆಯೂ ಇರಬೇಕಾದದ್ದು ತೀರ ಅವಶ್ಯಕ. ○

—ಗಿರಿಜ

ವಿಜ್ಞಾನದ ಕೆಲಸ ಮಹಿಳೆಯರ ಕೆಲಸ

ಅರ್ಜೆಂಟೈನಾದಲ್ಲಿ ವಿಜ್ಞಾನದ ವಿಷಯಕ್ಕೆ ವಿದ್ಯಾರ್ಥಿನಿಯರೇ ಮೇಲುಗೈ . ಅರ್ಜೆಂಟೈನಾದ ವಿಜ್ಞಾನ ಸಂಘದ ಪ್ರಕಟಣೆಯ ಪತ್ರಿಕೆಯ ಸಂಪಾದಕೀಯ ಈ ವಿಷಯವನ್ನು ಪ್ರಕಟಿಸಿದೆ. ಇದಕ್ಕೆ ಮುಖ್ಯ ಕಾರಣ, ಅಲ್ಲಿನ ಹುಡುಗರು ವಿಜ್ಞಾನವನ್ನು ಆರ್ಥಿಕವಾಗಿ ಸುಭದ್ರವಾದ ಅಧ್ಯಯನದ ವಿಷಯವೆಂದು ಪರಿಗಣಿಸುವುದಿಲ್ಲ. ಹೆಚ್ಚೆಂದರೆ ಅವರು ಅದನ್ನು ಹವ್ಯಾಸವೆಂದು ಪರಿಗಣಿಸುತ್ತಾರೆ. ಗಂಡಂದಿರು ಮನೆಯ ಹೊರಗೆ ಹೆಚ್ಚು ಜವಾಬ್ದಾರಿಯ, ಗುರುತರವಾದ ಉದ್ಯೋಗದಲ್ಲಿ ತೊಡಗಿದ್ದರೆ, ಗೃಹಿಣಿಯರು ತಮ್ಮ ಸಮಯವನ್ನು ಆನಂದದಿಂದ, ಹಗುರವಾಗಿ ಕಳೆಯಲು ವಿಜ್ಞಾನ ಹಾಗೂ ಅದಕ್ಕೆ ಸಂಬಂಧಪಟ್ಟ ವೃತ್ತಿಯಲ್ಲಿ ತೊಡಗುತ್ತಾರೆ. ಆದ್ದರಿಂದಲೇ ಶಾಲಾ, ಕಾಲೇಜುಗಳಲ್ಲಿ ವಿಜ್ಞಾನದ ಆಯ್ಕೆಗೆ ಪ್ರಪಂಚದ ಬೇರೆಡೆಗಳಲ್ಲಿ ಕಂಡು ಬರುವಂತೆ ನೂಕು ನುಗ್ಗಲಿಲ್ಲ. 'ಇದು ನಮ್ಮ ಸಂಸ್ಕೃತಿಗೇ ವೈಶಿಷ್ಟ್ಯವಾದ ಗುಣ' ಎಂದೆನ್ನುತ್ತಾರೆ, ಅಲ್ಲಿನ ಲೇಖಕಿ ಮಾರ್ಸೆಲೊ ಡಾಂಕೆರ್ಸ್. □

—'ಸರ್ಚ್'ನಿಂದ

If undelivered please return to :
Jagruthi Mahila Adhyayana Kendra
26, 1st Main Road, Vyalikaval
Bangalore-560 003

Reg. ... 3 (5) PRB. DECL 039/86-87
BOOK-POS... ODICALS

To,